॥ ಶ್ರೀಃ ॥

ಅಭಿಜ್ಞಾನ ಚಂದ್ರಹಾಸ

ಮಧ್ಯಾಹ್ನ ! ವಸಂತಋತು ! ಬಿಸಿಲಿನ ಬೇಗೆಯು ಜಗತ್ತನ್ನೇ ಆವರಿಸಿ, ದಾರಿಗರಿಗೆ ಅತಿತಾಪವನ್ನುಂಟುಮಾಡುತ್ತಿದ್ದಿತು. ಪಾದಚಾರಿಗಳಾಗಲೀ, ಅಶ್ವಾರೋಹಿಗಳಾಗಲೀ, ಗಜಾರೋಹಿಗಳಾಗಲೀ, ರಥಾರೂಢರಾಗಲೀ, ಸಂತಾಪವನ್ನು ಹೊಂದುವ ಸಮಯವೇ ಅದು. ಆಗ ಒಬ್ಬ ರಾಜನು ಅಶ್ವಾರೂಢನಾಗಿ ದಂಡಕಾರಣ್ಯದ ಕಾಡುದಾರಿಯಲ್ಲಿ ತಿರುತಿರಿಗಿ ಬಳಲಿ ನೀರಿನ ಆಶೆಯಿಂದ ಬಂದು, ಒಂದು ಜಲಾಶಯವನ್ನು ಕಂಡು ಆನಂದಪಡುತ್ತಾ ಅಲ್ಲಿಗೆ ಬಂದು ಅಶ್ವದಿಂದಿಳಿದು ಅದಕ್ಕೆ ನೀರನ್ನು ಕುಡಿಸಿ ಅದನ್ನು ಹಸುರಾದ ಹುಲ್ಲಿರುವ ಪ್ರದೇಶದಲ್ಲಿ ಮೇಯಲು ಬಿಟ್ಟು, ತಾನು ನಿರಶನನಾದರೂ ದಾಹದ ಬಾಧೆಯನ್ನು ತಡೆಯಲಾರದೆ ಹೊಟ್ಟೆಯತುಂಬ ನೀರನ್ನು ಕುಡಿದು, ಒಂದು ತಮಾಲ ತರುವಿನ ತಣ್ಣೆಳಲಲ್ಲಿ ಸ್ವಲ್ಪ ಮಲಗಿ, ಆಹಾರವಿಲ್ಲದೆ ಸಂಕಟವನ್ನು ಹೊಂದುತ್ತಾ ಆಲೋಚಿಸತೊಡಗಿದನು "ಆಹಾ ! ಎಂತಿದ್ದವನಿಗೆ ಎಂತಹ ಅವಸ್ಥೆಯು ಬಂದಿತು. ಮಂತ್ರಿಗಳಿಂದಲೂ, ಚೇಹುಗಾರರಿಂದಲೂ ವಿಜ್ಞಾಪಿಸಲ್ಪಡುವ ವಾರ್ತೆಗಳನ್ನು ಕೇಳುತ್ತಾ, ಯುಕ್ತವಾದ ಕಾರ್ಯಗಳನ್ನು ಮಾಡುವಂತೆ ಪ್ರಧಾನರಿಗೆ ಆಜ್ಞೆಗೈಯುತ್ತಾ, ರಾಜಭೋಗವನ್ನು ಅನುಭವಿಸುತ್ತಾ ಅರಮನೆಯಲ್ಲಿರದೆ ಕ್ಷುತ್ಪಿಪಾಸೆಗಳಿಂದ ಬಳಲುವನಾಗಿ, ನಿರ್ಜನವಾದ ಈ ಅರಣ್ಯದಲ್ಲಿರುವುದಾಯಿತಲ್ಲಾ ! ನನ್ನ ತಂದೆಯಾದ ಧರ್ಮಜನು "ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು" ಎಂದುದನ್ನು ಪರೀಕ್ಷಿಸಲೆಳಸಿ ವರ್ತಿಸುವ ನನಗೆ ಕಷ್ಟ ಪರಂಪರೆಗಳು ಒದಗುವುದೇನೋ ನಿಜ ; ಆದರೆ ನಾನು ಕಷ್ಟವನ್ನು ಅನುಭವಿಸುತ್ತಾ ಇರುವುದರಿಂದ ನನ್ನನ್ನು ನೋಡುವವರು, ಅಥವಾ ನನ್ನ ನಡತೆಯನ್ನು ಕೇಳಿದವರು ಕರ್ತವ್ಯ

ಕಾರ್ಯಗಳಲ್ಲಿ ಜಾಗ್ರತೆಯನ್ನು ವಹಿಸಬಹುದು. ಹಾಗಾದರೆ ನಾನು ಪ್ರಪಂಚಕ್ಕೆ ಉಪಕಾರವನ್ನು ಮಾಡಿದಂತೆಯೇ ಆಯಿತು:—ಎಂದು ಹೇಳಿ ಮತ್ತೆ "ಎಲೈ ವಿಜಯಸೇನ! ಎಂತಹ ವೈರಿಗಳ ಬಾಧೆಗೂ ಎದೆಗುಂದದ ನೀನು, ಈ ಅಲ್ಪವಾದ, ನಿನ್ನಧೀನದಲ್ಲಿರುವ ಹಸಿವಿಗಾಗಿ ವ್ಯಸನಪಡುವಿಯಲ್ಲಾ! ಎಲೆ ಹಸಿವೆ! ನಿನ್ನ ಪ್ರತಾಪವು ಎಂತಿಹುದು! ಎಂತಹ ನಿಶ್ಚಲಮನಸ್ಕರಾದ ಯೋಗಿಗಳನ್ನಾದರೂ ನಿನ್ನ ಸೇವೆಗೆ ಬರ ಮಾಡಿಕೊಳ್ಳುವೆ? ನಿನ್ನ ದೆಶೆಯಿಂದ ಪ್ರಪಂಚದಲ್ಲಿ ಎಂತಹ ಪ್ರಾಣಪ್ರಿಯರೂ, ಬಂಧುಗಳೂ ಒಬ್ಬರಿಗೊಬ್ಬರು ಅನ್ಯಾಯವನ್ನಾಚರಿಸುವಂತೆ ಮಾಡುವೆ! ಮತ್ತು ಎಂತಹ ರಾಜಾಧಿರಾಜನಾದರೂ, ಒಂದು ಕ್ಷಣವಾದರೂ ನಿನ್ನ ಸೇವೆ ಮಾಡುವಂತೆ ಮಾಡಿಕೊಳ್ಳುವೆ! ನಿನ್ನನ್ನು ತೃಪ್ತಿಪಡಿಸಿ ಧನ್ಯರಾದವರು ಈ ಪ್ರಪಂಚದಲ್ಲಿ ಯಾರಾದರೂ ಇರುವರೇ? ಜನರನ್ನು ವಿಧವಿಧವಾದ ವೇಷಭಾಷೆಗಳಿಂದ ನಾಟಕವಾಡಿಸುವೆ! ಕಪಿಯಂತೆ ಹಲ್ಲು ಕಿರಿಯಿಸುವೆ. ಹಕ್ಕಿಯಂತೆ ಹಾರಾಡಿಸುವೆ. ಪ್ರಾಣವನ್ನು ತೃಣಕ್ಕಿಂತಲೂ ಕಡೆಗಣಿಸುವಂತೆ ಮಾಡುವೆ. ಎಂತಹ ಧೀರನನ್ನಾದರೂ, ದೀನರನ್ನಾಗಿಸುವೆ. ನಿನ್ನ ಮಹಾತ್ಮೆಯನ್ನು ಅಷ್ಟಿಷ್ಟೆಂದು ಹೇಳಲಸದಳವು. ಅಷ್ಟೇಕೆ? ನಿನಗಂಜದಿರುವನಾವನೋ ಅವನೇ ಧೀರನು! ಇನ್ನು ನಿನ್ನ ಸೇವೆಯನ್ನು ಮಾಡುವುದಕ್ಕೆ ಪರಿಕರಂಗಳನ್ನೊದಗಿಸಬೇಕಾಗಿದೆ! ಇಲ್ಲಿ ಏನೂ ಇಲ್ಲವಲ್ಲ! ಆವ ಫಲವೃಕ್ಷಂಗಳೂ ಕಾಣಿಸುವುದಿಲ್ಲ (ಎಂದು ಸುತ್ತಲೂ ನೋಡಿ) ಅಲ್ಲಿ ಹಣ್ಣುಗಳಿಂದ ಕೂಡಿದ ಜಂಬು ನೇರಳೆಯ ಮರವಿರುವಂತೆ ಕಾಣುವುದು. ಹೋಗಿ ನೋಡುವೆನು"(ಎಂದು ಹೊರಟುಹೋದನು) ಅಷ್ಟರಲ್ಲಿ, ಅಲ್ಲಿಗೆ, ಪ್ರತಿಜ್ಞಾಪರಿಪಾಲನೋತ್ಸುಕಳಾದ ವಿಜಯಸೇನನ ಪತ್ನಿ ಚಾತುರ್ಯವತಿ (ಪ್ರವೇಶಿಸಿ) ಆಹ! ನನ್ನ ಪ್ರಾಣಕಾಂತನು "ನಿಸರ್ಗನಿಪುಣಾಸ್ತ್ರಿಯಃ" ಎಂದು ನಾನು ವಾದಿಸಿದುದಕ್ಕಾಗಿಯೇ, ನನ್ನನ್ನು ಮದುವೆಯಾಗಿ ಜನಸಂಚಾರವಿಲ್ಲದ ಸಮುದ್ರ ಮಧ್ಯದಲ್ಲಿನ ಸಣ್ಣ ದ್ವೀಪವೊಂದರಲ್ಲಿರಿಸಿದನು. ನನ್ನ ಚಮತ್ಕಾರದಿಂದ ನನ್ನ ಮನೆಯಲ್ಲಿದ್ದ ಪಾತ್ರೆಗಳನ್ನು, ಮತ್ತು ಬಾಳೆಯ ಮರದ ತುಂಡುಗಳನ್ನು, ಕೂಡಿಸಿ, ತೆಪ್ಪವನ್ನಾಗಿ ಕಟ್ಟಿ, ಅದರ ಸಹಾಯದಿಂದ ಧೈರ್ಯವಾಗಿ ಹೊಳೆಯನ್ನು

ದಾಟಿ ಇಲ್ಲಿಗೆ ಬಂದೆನು. ಮಹಾರಾಜನಾದ ನನ್ನ ಪತಿಯನ್ನು ಉಪಾಯದಿಂದ ಮೋಹಗೊಳಿಸಿ, ನನ್ನ ಮಾತನ್ನು ದೃಷ್ಟಾಂತಪಡಿಸಬೇಕಾಗಿರುವುದು, ನನಗಾದರೋ ಮಾರ್ಗಾಯಾಸವು ಬಹುವಾಗಿರುವುದು. ಹಸಿವು, ಬಾಯಾರಿಕೆಯನ್ನಂತೂ ಹೇಳುವಂತಿಲ್ಲ. ಇಲ್ಲಿ ಎಲ್ಲಿಯಾದರೂ ಫಲಗಳು ದೊರೆತರೂ ತಿಂದು ದಣುವಾರಿಸಿಕೊಳ್ಳುವೆನು." ಎಂದು ಹೇಳುತ್ತಾ ಬಂದು ಅಲ್ಲಿ ದೊರೆತ ಫಲಗಳನ್ನು ಆರಿಸಿ ತಂದು, ಕೆಲವು ಹಣ್ಣುಗಳನ್ನು ತಿನ್ನುತ್ತಿದ್ದಳು. ಅಷ್ಟರಲ್ಲಿ ಹಸಿವಿನಿಂದ ಬಳಲಿದ ವಿಜಯಸೇನನೂ ಅಲ್ಲಿಗೆ ಬಂದನು. ಚಾತುರ್ಯವತಿಯು ರಾಜನನ್ನು ನೋಡಿ, "ಆಹಾ! ನನ್ನ ಪತಿಯೂ ಇಲ್ಲಿಗೆ ಬಂದಿರುವನು. ರಾಜ್ಯ ಕೋಶಗಳನ್ನು ಬಿಟ್ಟು ಏಕಾಂಗಿಯಾಗಿ ಇಲ್ಲಿಗೆ ಬರಲು ಕಾರಣವೇನೋ ತಿಳಿಯಲಿಲ್ಲ! ಬಂದುವೇಳೆ ನನ್ನ ವಿಯೋಗದಿಂದೇನಾದರೂ ಹೀಗೆ ವಿರಕ್ತನಾಗಿ ಬಂದಿರಬಹುದೋ, ಅಥವಾ ಆವುದಾದರೂ ಕಾರ್ಯ - ಉದ್ದೇಶ - ಸಿದ್ಧಿಗಾಗಿ ಹೀಗೆ ಏಕಾಂಗಿಯಾಗಿ ಬಂದಿರಬಹುದೋ? ಹೇಗೂ-ಸಹಾಯಕರಾರೂ ಇಲ್ಲದೆ ಬಂದಿರುವನು. ಹಸಿವು, ಬಾಯಾರಿಕೆಗಳಿಂದ ಅಧಿಕವಾಗಿ ಬಳಲಿರುವನು. ನಾನೀತನನ್ನು ಮೋಹಗೊಳಿಸಲು ಇದೇ ಸಮಯವು." ಎಂದು ಯೋಚಿಸಿ, ಮಹಾರಾಜನನ್ನು ಕುರಿತು, "ಎಲೈ, ಪುಣ್ಯಾತ್ಮನೇ! ದಾರಿ ನಡೆದು ದುಡಿದು ಬಂದಿರುವಂತೆ ಕಾಣುವುದು. ಇದೋ ಈ ಪಕ್ವ ಫಲಗಳನ್ನು ತಿಂದು ಆಯಾಸಪರಿಹಾರ ಮಾಡಿಕೊಳ್ಳುವುದು." ಎಂದು ಪಕ್ವವಾದ ಹಣ್ಣುಗಳನ್ನು ಬಿಡಿಸಿ ರಾಯನ ಕೈಗೆ ಕೊಟ್ಟಳು. ರಾಯನು ಅವುಗಳನ್ನು ತೆಗೆದುಕೊಂಡು—"ಎಲೈ! ನಾರೀಮಣಿಯೇ! ನೀನಾರು? ಇಲ್ಲಿಗೇಕೆ ಬಂದಿರುವೆ?" ಎಂದನು.

ಚಾತು—ನಾನು ಗಂಧರ್ವರಾಜಕನ್ಯೆ! ಕಾರ್ಯಾರ್ಥಿಯಾಗಿ ಇಲ್ಲಿಗೆ ಬಂದೆನು. ಅಷ್ಟರಲ್ಲಿ ನೀನು ಅತ್ಯಂತ ಆಯಾಸಪಟ್ಟು ಬಂದಿರುವಂತೆ ತಿಳಿದುಬಂದುದರಿಂದ ನಿಂತೆನು.

ರಾಜಂ—"ಮಹನೀಯಳೇ! ನಿನ್ನ ವಿಶ್ವಾಸಕ್ಕೆ ಪಾತ್ರನಾದ ನಾನೇ ಕೃತಾರ್ಥನು" ಎಂದು ಆ ಹಣ್ಣುಗಳನ್ನು ತಿಂದು ಕೈ ತೊಳೆದು

ಕೊಂಡು ಅವಳಿಂದ ಮತ್ತೆ ಕೊಡಲ್ಪಟ್ಟ ದಾಡಿಮ (ದಾಳಿಂಬ) ಫಲದಲ್ಲಿ ಬಂದೊಂದು ಬೀಜವನ್ನೇ ಬಾಯಲ್ಲಿ ಹಾಕಿಕೊಳ್ಳುತ್ತಾ "ಮಹಾ ಭಾಗೆ! ನಿನ್ನ ನಿಜವಾದ ವಾರ್ತೆಯನ್ನು ತಿಳಿಯುವ ಕುತೂಹಲವುಳ್ಳವನಾಗಿರುವೆನು. ಗಂಧರ್ವರಾಜನ ಕುವರಿ ಯೆಂದು ಹೇಳುವಿಯಷ್ಟೆ? ಪಡಿಯರತಿ (ಸಂಗಾತಿ) ಯರಿಲ್ಲದೆ ಓರ್ವಳೇ ಜನಸಂಚಾರವಿಲ್ಲದೀ ಅರಣ್ಯದಲ್ಲಿರುವುದೆಂದರೆ ನನಗೇ ಭಯವಾಗುವುದಲ್ಲಾ!

ಚಾತು—ಮಹನೀಯನೆ! ನಾನು ನಿಜವಾಗಿ ಗಂಧರ್ವರಾಜನಂದನೆ! ನನ್ನ ತಂದೆಯು, ನನಗೆ ಅನುರೂಪನಾದ ವರನನ್ನು ಎಲ್ಲೆಲ್ಲಿ ಹುಡುಕಿದರೂ ನನಗೆ ತಕ್ಕವನನ್ನು ಕಾಣದಿರಲು, ನಾನು ಶರ್ವಾಣಿಯ ಕೃಪೆಯನ್ನು ಕೋರಿ, ಇಲ್ಲಿ ತಪವನ್ನು ಮಾಡುತ್ತಿದ್ದೆನು. ನಿನ್ನಿನ ದಿನದ ಸ್ವಪ್ನದಲ್ಲಿ ಸರ್ವಮಂಗಳೆಯು ನಿಜಸ್ವರೂಪದಿಂದ ಅತಿ ಕರುಣೆಯನ್ನು ತೋರಿದಳು.

ರಾಜಂ—ಏನದು?

ಚಾತು—"ವತ್ಸೆ! ನಾಳೆಯೆ ನಿನ್ನ ಮನದನ್ನನು ಬಂದು ನಿನ್ನಿದಿರಿಗೆ ನಿಲ್ಲುವನೆಂದು"

ರಾಜಂ—ಹಾಗಾದರೆ ನನ್ನ ಪುಣ್ಯಪಾದಪವು (ತರು) ಪಣ್ತುದು? (ಫಲಿಸಿತು)

ಚಾತು—ಹೇಗೆ?

ರಾಜಂ—ಭುವನೈಕಸುಂದರಿಯಾದ ನಿನಗೆ ಮಹಾರಾಜಾಧಿರಾಜನಾದ ನಾನೇ ಅನುರೂಪನಲ್ಲವೆ?

ಚಾತು—(ಆತುರದೊಡನೆ) ನೀನು ಮಹಾರಾಜನೆ?

ರಾಜಂ—ಅಹುದು!

ಚಾತು—ಹಾಗಾದರೆ ಆವದೇಶೀಯರು ನಿನ್ನನ್ನು ರಾಜನಾಗಿ ಪಡೆದಿರುವ ಪುಣ್ಯಶಾಲಿಗಳು? ನಿನ್ನ ತಾಯಿತಂದೆಗಳಾರು? ನಿನ್ನ ಹೆಸರೇನು?

ರಾಜಂ—ಮಂಜುಳೆ? ಮಾಗಧ ದೇಶಾಧೀಶನಾದ ವಿಜಯಸೇನನೆಂಬ ನಾನು ಪ್ರಖ್ಯಾತನಾದ ಧರ್ಮಧ್ವಜನ ಪ್ರೇಮಪುತ್ರನು.

ಚಾತು—ಮಹಾರಾಜನೆ! ಈಗ ನಾನು ನಿನ್ನ ಅಧಿಕಾರಕ್ಕೆ ಬಳಪಟ್ಟ ವಳಾದೆನು. ಮಹಾತ್ಮನಾದ ನೀನು ಈ ವಿಪಿನಕ್ಕೆ ಬಂದಿರುವ ಕಾರಣವೇನು?

ರಾಜಂ—ಮೃಗಯಾವಿಹಾರಕ್ಕಾಗಿ ಬಂದವನು, ಬಂದು ದುಷ್ಟ ಶಾರ್ದೂಲವನ್ನಟ್ಟಿಕೊಂಡು ಬರುತ್ತಾ ಈ ಗಹನವಾದ ಕಾನನವನ್ನು ಸೇರಿದೆನು. ನನ್ನ ಪೂರ್ವಪುಣ್ಯದಿಂದ ನಿನ್ನನ್ನು ಕಂಡೆನು. ನಾನು ಪ್ರೀತಿಸಿದಂತೆಯೇ ನೀನು ಪ್ರೀತಿಸುವುದಾದರೆ ಇಂದಿಗೆ ನನ್ನ ಜನ್ಮವು ಸಾರ್ಥಕತೆಯನ್ನು ಹೊಂದಿತು.

ಚಾತು—ಮಹಾರಾಜನೆ! ಸರ್ವಾಧಿಕಾರಿಯೂದ ನಿನಗೆ ಪ್ರತಿಯಾಡಲು, ನಾನು ಅಬಲೆಯಲ್ಲವೆ? ಆದರೆ ಪ್ರೇಮವೆಂಬುದು ಮನಃಪೂರ್ವಕವಾದ ಅಧಿಕಾರವನ್ನೊಂದಿರುವುದು. ॥ ರಾಜಾನೋ ಬಹುವಲ್ಲಭಾಃ ॥ ಎಂಬ ಆರ್ಯರನುಡಿಯಂತೆ ಅರಸರು ಬಹುವಲ್ಲಭೆಯರುಳ್ಳವರು; ನಿನಗೆ ನನ್ನಲ್ಲಿ ಈಗಿನ ಪ್ರೀತಿಯೇ ಸ್ಥಿರವಾಗಿ ನಿಂತಿರುವುದೆಂಬುದು ದೃಢವಾದುದು. ಮಹನೀಯನಾದ ನೀನು ಸಾಮಾನ್ಯರಂತೆ ವರ್ತಿಸಲಾರೆಯೆಂಬ ನಂಬಿಕೆ ಇದೆ. ಆದರೂ;

ರಾಜಂ—ತಿಳಿಯಿತು! ತಿಳಿಯಿತು! ಪ್ರೇಯಸಿ! ನಾನು ಹಾಗೆಂದಿಗೂ ಮಾಡಲಾರೆನು.

ಚಾತು—ಮೊದಲು ಶಕುಂತಳೆಯು ಚಾಪಲ್ಯದಿಂದ ದುಷ್ಯಂತಮಹಾರಾಜನನ್ನುವರಿಸಿ ಆತನಿಂದ ಕಡೆಗೆ ತಿರಸ್ಕೃತಳಾದುದನ್ನು ಕೇಳಿಲ್ಲವೇ?

ರಾಜಂ—ಆಗ ಶಕುಂತಳೆಯು ಗುರುತಿಗಾಗಿಕೊಟ್ಟಿದ್ದ ಅಂಗುಲೀಯಕವನ್ನು ಥಟ್ಟನೆ ಆ ರಾಜನಿಗೆ ತೋರಿಸಿದ್ದರೆ ಹಾಗಾಗುತ್ತಿದ್ದಿತೆ?

ಚಾತು—ಸತ್ಯಸಂಧರಾದ ನಿಮ್ಮಂತಹವರು ಮನಃಪೂರ್ವಕವಾಗಿ ಹಾಗೆ ಮಾಡದಿದ್ದರೂ, ರಾಜರಿಗಿರುವ ನೈಜವಾದ ಕಾರ್ಯಗೌರವಗಳಿಂದ ಮರೆತೋ, ಇನ್ನಾವಕಾರಣಗಳಿಂದಲೋ, ಹಾಗಾಗಬಹುದಲ್ಲವೆ?

ರಾಜಂ—ಮಂಗಳೆ! ನಿನ್ನ ಹೆಸರನ್ನು ಅನ್ವರ್ಥಪಡಿಸಿಕೊಳ್ಳುವೆ!

ಚಾತು—ಕ್ಷಮಿಸು! ಮಹಾರಾಜನೆ! ಈಗ ನಿನ್ನ ಇಷ್ಟದಂತೆ ಅನುವರ್ತಿಸಿದರೆ ನಿನ್ನ ಮನೋವಲ್ಲಭೆಯು ಕೋಪಕ್ಕೆಪಾತ್ರಳಾಗುವೆನಲ್ಲವೆ?

ರಾಜಂ—ಹಾಗಾಗುವಂತೆ ನಾನೆಂದಿಗೂ ಮಾಡೆನು. ಪತಿಯು ಅವಜ್ಞೆನಾದರಲ್ಲವೆ, ಹೀಗಾಗುವುದು?

ಚಾತು—ಮಹಾರಾಜನೆ! ನನ್ನ ಮಗನಿಗೇ ರಾಜ್ಯಾಧಿಕಾರವನ್ನು ಕೊಡುವೆನೆಂದು ಭಾಷೆಯನ್ನು ಕೊಟ್ಟರೆ;

ರಾಜಂ—ಪ್ರಿಯೆ! ಈಗ ನಾನು ಧನ್ಯನು? ನನ್ನ ಮನಃಪೂರ್ವಕವಾಗಿ ನಿನ್ನನ್ನೇ ಪಟ್ಟಮಹಿಷಿಯಾಗಿ ಒಪ್ಪಿರುವೆನು. ನಿನ್ನ ಮಗನಿಗೇ ರಾಜ್ಯಾಧಿಕಾರವು ಒಪ್ಪಿಸಲ್ಪಡುವುದು.

ಚಾತು—ಮಹಾರಾಜನೆ! ನೀನು ಮಹಾತ್ಮನಾದುದರಿಂದ ಸತ್ಯವಾಕ್ಯಪರಿಪಾಲಕನಾದರೂ ಪುರುಷರು ತಮ್ಮ ಆತುರಕ್ಕೋಸ್ಕರ ಸ್ತ್ರೀಯರಿಗೆ ಬಗೆಬಗೆಯಾದ, ಮೃದುವಾಕ್ಯಗಳಿಂದ ಆಶೆಯನ್ನುಂಟುಮಾಡಿ, ತಮ್ಮ ಕಾರ್ಯಸಾಧನೆಯನ್ನು ಮಾಡಿಕೊಳ್ಳುವರು, ಆದುದರಿಂದ ನೀನು ಇಲ್ಲಿಂದ ಹೊರಟುಹೋದಮೇಲೆ ನನ್ನ ನೆನಪು ನಿನಗೆ ಬರುವುದೆಂದು ನಂಬುವುದು ಹೇಗೆ?

ರಾಜಂ—ಇದೋ? ಈ ಮುದ್ರೆಯುಂಗುರವನ್ನು ತೆಗೆದುಕೊಳ್ಳುವಳಾಗು.

ಚಾತು—ಮಹಾರಾಜನೆ! ಅನುಗ್ರಹಿಸಲ್ಪಟ್ಟೆನು! ಆದರೆ, ನೀನು ಮತ್ತೆ ಚಾರರನ್ನು ಕಳುಹಿಸಿ ನನ್ನನ್ನು ಕರೆಯಿಸಿಕೊಳ್ಳುವವರೆಗೂ ನಾನು ಈ ಕಾಡಿನಲ್ಲೇ ಇರಬೇಕಾಗುವುದರಿಂದ ಅವರೆಗೂ ಈ ನಿನ್ನ ಚಂದ್ರಹಾಸವು ನನ್ನ ಬಳಿಯಲ್ಲಿರಲಿ!

ರಾಜಂ—ಪ್ರಿಯೆ! ಇದು ಮತ್ತೊಬ್ಬರ ಕೈಗೆ ಕೊಡತಕ್ಕುದಲ್ಲವು. ಆದರೂ ನನ್ನ ಅರ್ಧಾಂಗಿಯಾದ ನಿನ್ನ ಕುಶಲವೇ ನನ್ನ ಕುಶಲವಲ್ಲವೆ? ಇದು ನಿನ್ನಲ್ಲಿಯೇ ಇರಲಿ; ಆದರೆ ರಾಣಿ! ನೀನೊಬ್ಬಳೇ ಇಲ್ಲಿ ಏಕೆ ಇರಬೇಕು? ನಡೆ, ನಾವಿಬ್ಬರೂ ಪಟ್ಟಣಕ್ಕೆ ಈಗಲೇ ಹೊರಟುಹೋಗುವ!

ಚಾತು—ಆರ್ಯನೆ ! ನನ್ನ ತಂದೆಗೆ ಈ ವೃತ್ತಾಂತವನ್ನು ತಿಳುಹಿಸಿ, ಆತನಿಂದ ನಿನ್ನ ಬಳಿಗೆ ಆಹ್ವಾನಪತ್ರಿಕೆಯನ್ನು ಕಳುಹುವೆನು.

ರಾಜಂ—ಸಂತೋಷಿತನಾದೆನು, ಹಾಗಾಗಲಿ ? ಪ್ರಿಯೆ ! ನಡೆ, ಆ ಲತಾವಿತಾನದ ಸೊಂಪನ್ನು ನೋಡುವ ! ಪುಷ್ಪಿತವಾದ ಈ ಮಲ್ಲಿಕಾವಲ್ಲಿಯು ಆತಳಿತಸಹಕಾರದ ಶಾಖೆಯನ್ನು ಆಲಿಂಗಿಸಿ ಮೆರೆಯುವುದನ್ನು ನೋಡಿದೆಯಾ ? (ಎಂದಿಬ್ಬರೂ ಹೊರಟು ಹೋದರು ; ಸ್ವಲ್ಪಹೊತ್ತಿನಲ್ಲಿಯೇ ಚಾತುರ್ಯವತಿಯು ಪ್ರವೇಶಿಸಿದಳು)

ಚಾತು—ರಾಜನಿಂದ ಅಪ್ಪಣೆಯನ್ನು ಪಡೆದೆನು. ನನ್ನ ಯುಕ್ತಿತರುವು ಫಲಿಸಿತು. ಇನ್ನು ನಾನು ಧನ್ಯಳು ! ನನ್ನ ಮಾತನ್ನು ಕಾಲಾನುಸಾರವಾಗಿ ಮಹಾರಾಜನು ಒಪ್ಪಿಕೊಳ್ಳುವಂತೆ ಮಾಡುವುದಕ್ಕೆ ಈ ಚಂದ್ರಹಾಸವು ಸಹಕಾರಿಯಾಗಿರುವುದು. ಇನ್ನು ನನ್ನ ಪ್ರಯತ್ನದಿಂದ ಸ್ವಸ್ಥಲವಾದ ಸುಂದರ ದ್ವೀಪಕ್ಕೆ ಹೋಗಿ ಸೇರಿಕೊಳ್ಳುವೆನು (ಎಂದು ಹೊರಟು ಹೋದಳು)

ರಾಜಂ—(ಪ್ರವೇಶಿಸಿ) ಆಹ ! ರಮಣೀಮಣಿಯ ಸಂಗವು ಅಮಂದಾನಂದದಾಯಕವಾಯಿತು. ಆಕೆ ತನ್ನ ತಂದೆಯಿಂದ ನನಗೆ ಆಹ್ವಾನಪತ್ರಿಕೆಯನ್ನು ಕಳುಹಿಸುವುದಾಗಿ ಹೇಳಿ ಹೊರಟು ಹೋದಳು. ಎಂದಿಗೆ ಕಳುಹಿಸುವಳೋ ? ಸ್ತ್ರೀಯರಮಾತು, ನಂಬತಕ್ಕುದಾಗಿಲ್ಲವು. ಆಕೆ ನಿಜವಾಗಿ ಅನನ್ಯಪೂರ್ವಿಕೆಯೋ ? ಅಲ್ಲವೋ ? ಆಹಾ ! ಹಾಗೆ ಎಣಿಸಬಾರದು. ರತ್ನವು ರುಕ್ಮದ ಸಂಗವನ್ನಪೇಕ್ಷಿಸುವುದಲ್ಲದೆ, ಹಿತ್ತಾಳೆಯನ್ನು ಅಪೇಕ್ಷಿಸುವುದೇ ? ಮಹಾರಾಜವಂಶೀಯನಾದ ನನ್ನ ಮನಸ್ಸು ನೀಚಪಾತ್ರದಲ್ಲಿ ಅನುವರ್ತಿಸದು ! ಇನ್ನು ಕೆಲಕಾಲದಲ್ಲಿಯೇ ಆಹ್ವಾನಪತ್ರವೂ ಬರಬಹುದು. ಬಾರದಿದ್ದರೆ ಹೋಗಲಿ ! ನನ್ನ ಅಂಗುಲೀಯಕವು ಹೇಗೋ ಮತ್ತೆ ನನ್ನ ಹಸ್ತಂಗತವಾಗಿರುವುದು. ಆ ಮೋಹಾವೇಶದಲ್ಲಿ ನೆಲದಮೇಲಿದನ್ನು ಆಕೆಯಿಟ್ಟಿದ್ದಾಗ ಅಜ್ಞಾನದಿಂದ ಇದನ್ನು ಮತ್ತೆ ನಾನು ಧರಿಸಿರಬಹುದು. ಆಹಾ !

ಆ ಸಾಧ್ವಿಗೆ ಅನ್ಯಾಯಮಾಡಿದಂತಾಯಿತಲ್ಲಾ ? ಮತ್ತೆ ಆಕೆಯ ಕೈಗೆ ಕೊಟ್ಟು ಬರುವೆನೆಂದರೆ ಎತ್ತಹೋದಳೋ ? ನನ್ನ ಚಂದ್ರ ಹಾಸವಾದರೂ ಆಕೆಯ ವಶದಲ್ಲಿರುವುದಷ್ಟೆ? ಸಾಕು ! ಆ ಮನೋಹರೆಯ ಮುಖವನ್ನೆಂದಿಗೆ ಮತ್ತೆ ಸಂದರ್ಶಿಸುವೆನೋ ಕಾಣೆ ! ಓಹೋ! ಆ ಮಾನಿನಿಯು ಅಲ್ಲಿ ಹೋಗುತ್ತಿರುವಂತೆ ಕಾಣುವುದು, ಪ್ರಿಯೆ ? (ಎಂದು ಕೂಗಿ ಸ್ವಲ್ಪ ದೂರ ನಡೆದು) ಆಹಾ ! ಸುಂದರಿಯಲ್ಲ ! ಪುಷ್ಪಭಾರದಿಂದ ಬಾಗಿದ ಕೆಂದಳಿರಿನಿಂದ ಕೂಡಿದ ಮಲ್ಲಿಕಾವಲ್ಲೀ ವಿತಾನದಲ್ಲಿ ಪೊಸದಾದ ಮಧುರ ಮಕರಂದ ಪಾನವನ್ನು ಮಾಡಿ ಥಟ್ಟನೆ ಬೀಸಿದ ಗಂಧವಹನುರುವಣೆಗೆ ಝುಂಕಾರ ಶಬ್ದದಿಂದ ಗುಂಪಾಗಿ ಮೇಲಕ್ಕೆ ಎದ್ದ ಭ್ರಮರಗಳ ಸಮೂಹವು ! ನನ್ನ ಮನಸ್ಸಿಗಿಂಪಾಗಿರುವ ಮಧುರಾಲಾಪದಿಂದ ಆ ಪ್ರಮದೆಯು ತಲೆವಾಗಿ ನಿಂತಿದ್ದಂತೆ ತೋರಿತು ? ನನಗೇನು ಉನ್ಮಾದವೋ? ಸ್ವಪ್ನವೋ? ನನ್ನ ಕಣ್ಣುಗಳೆರಡನ್ನೂ ತೆರೆದುಕೊಂಡಿರುವೆನಲ್ಲವೆ?ನಿದ್ರೆಯೆಲ್ಲಿಯದು? ಇದು ಉನ್ಮಾದರೀತಿಯೂ ಅಲ್ಲವು! ನಿಜವಾದ ಅನುಭವದಭ್ರಾಂತಿ! ಆಗಲಿ! ಮಂಜುವಾಣಿಯ ಅವಧಿಯನ್ನು ನಿರೀಕ್ಷಿಸುತ್ತಿರುವೆನು. ಇನ್ನು ಪಟ್ಟಣವನ್ನು ಕುರಿತು ಹೊರಡುವೆನು. (ಎಂದು ಹೊರಟು) ಓಹೋ ! ಮರೆತೆನಲ್ಲಾ ? ನಾನು ಮೃಗಯಾವಿಹಾರಕ್ಕೆ ಬರುವದಾರಿಯಲ್ಲಿ ಒಬ್ಬ ಬ್ರಾಹ್ಮಣ ಬಾಲಕನು ಕೊಟ್ಟ ಓಲೆಯ ಅರ್ಥವನ್ನು ಪರೀಕ್ಷಿಸ ಲೆಳಸಿ ಹೊರಟಿರುವೆನಲ್ಲವೆ ? ನಾನು ಬರುವವರೆಗೂ ರಾಜ್ಯಾಧಿಕಾರವನ್ನು ನೋಡಿಕೊಂಡಿರುವಂತೆ ನನ್ನ ಮಿತ್ರನಾದ ಸುಮಿತ್ರನೆಂಬ ಮಂತ್ರಿಮುಖ್ಯನಿಗೆ ಆಜ್ಞೆಮಾಡಿ ಬಂದಿರುವೆನು. ಅವನ ಬುದ್ಧಿ ಅನ್ಯಾದೃಶವಾದುದು ! ಅವನಿರುವುದರಿಂದ ರಾಜ್ಯಾಡಳಿತದ ಆಲೋಚನೆಯು ನನಗೇನೂ ಇಲ್ಲವು. ಈಗ ನಾನೆಲ್ಲಿಗೆ ಹೋಗಬೇಕು ? ಎಂದು ಓಲೆಯನ್ನು ತೆಗೆದುನೋಡಿ__

1. "ಊಟಮಾಡುವ ಮೊದಲು ನಿನ್ನ ಎಲೆಯ ಅನ್ನದಲ್ಲಿ ಒಂದು ತುತ್ತನ್ನು ತೆಗೆದು ಮತ್ತೊಂದು ಪ್ರಾಣಿಗೆ ಹಾಕು !

2. ಮಲಗುವುದಕ್ಕೆ ಮೊದಲು ಸಪ್ಪಳವಾಗುವಂತೆ ನಿನ್ನ ಕೈಯಿಂದ ಹಾಸಿಗೆಯನ್ನು ತಟ್ಟು !
3. ಪರಸ್ಥಳದಲ್ಲಿ (ಹೊಸ ಸ್ಥಳದಲ್ಲಿ) ಮೈಮರೆದು ನಿದ್ರೆಯನ್ನು ಹೊಂದಬೇಡ !
4. ಸ್ನೇಹಿಸುವುದಕ್ಕೆ ಮೊದಲು ಅವರ ಗುಣಗಳನ್ನು ಪರಿಶೀಲಿಸು !" ಈ ನಾಲ್ಕು ವಾಕ್ಯಗಳನ್ನೂ ನಾನಿರುವ ಪಟ್ಟಣದಲ್ಲಿಯೇ ಪರೀಕ್ಷಿಸಬಹುದಾಗಿದ್ದಿತಲ್ಲವೆ ? ಆದರೆ ಸ್ವಸ್ಥಾನದಲ್ಲಿ ಸಹಜವಾದ ಅಂಶವನ್ನು ತಿಳಿಯುವುದಕ್ಕೆ ಎಷ್ಟೋ ವಿಘ್ನಂಗಳಿರುವುವು. ನಾನು ರಾಜನಾದುದರಿಂದ ನನ್ನ ಇಷ್ಟಾನುಸಾರವಾಗಿಯೇ ಎಲ್ಲರೂ ನಡೆಯುವರು. ಪರಸ್ಥಳದಲ್ಲಿ ನಾನೊಬ್ಬ ಸಾಮಾನ್ಯನಾಗಿರುವೆನು. ಅಲ್ಲಿ ನನ್ನನ್ನು ಇಂತಹವನೆಂದು ಆರೂ ಗುರ್ತಿಸಲಾರರು. ಅಲ್ಲಿ ನನ್ನ ಇಷ್ಟ ಪೂರ್ತಿಯಾಗುವುದು. ಇನ್ನೂ ಅನೇಕ ವಿಷಯಗಳೂ ನನ್ನ ತಿಳಿವಿಗೆ ಬರುವುವು. ಇನ್ನು ಹೊರಡುವೆನು. (ಎಂದು ತನ್ನ ಕುದುರೆಯನ್ನೇರಿ ಮುಂದಕ್ಕೆ ಪ್ರಯಾಣ ಮಾಡಿದನು.)

ಹೋಗುತ್ತಾ ಹೋಗುತ್ತಾ ಇರುವಾಗಲೇ ಸಂಜೆಯಾಯಿತು. ದಾರಿಯ ಪಕ್ಕದಲ್ಲಿ ಒಂದು ದೊಡ್ಡ ಗ್ರಾಮವು ಕಣ್ಣಿಗೆ ಕಾಣಿಸಿತು. ಈತನು ಬೆಳಗಿನಿಂದಲೂ ಆಹಾರವಿಲ್ಲದೆ ಬಹಳ ಬಳಲಿದ್ದನು. ಆ ಗ್ರಾಮದಲ್ಲಿ ಆ ರಾತ್ರಿ ಯಿದ್ದು ಮುಂದಕ್ಕೆ ಹೊರಡೋಣವೆಂದು ಆಲೋಚಿಸಿದನು. ಆಮೇಲೆ ಆ ಗ್ರಾಮದೊಳಕ್ಕೆ ಹೋಗಿ ಪರಸ್ಥಳದವರಿಗಾಗಿ ಧಾರ್ಮಿಕರು ಏರ್ಪಡಿಸಿದ್ದ ಸತ್ರದ ಬಳಿಗೆ ಬಂದು ಕುದುರೆಯನ್ನು ಅಲ್ಲಿ ಕಟ್ಟಿಹಾಕಿ ತಾನೊಂದು ಕಡೆ ಮಲಗಿದನು. ತಾನು ಹಸಿವೆಯಿಂದ ಬಳಲಿದವನಾದರೂ ಮತ್ತೊಬ್ಬರ ಮನೆಗೆ ಊಟಕ್ಕೆ ಹೋಗುವುದಕ್ಕೆ ಇಷ್ಟಪಡಲಿಲ್ಲವು. ತಾನು ಇತರರಿಗೆ ಯಥೇಷ್ಟವಾಗಿ ತನ್ನ ಮನೆಯಲ್ಲಿ ಮನಃಪೂರ್ವಕವಾಗಿ ಶಾಲ್ಯಾನ್ನವನ್ನಿಕ್ಕುತ್ತಿದ್ದವನು ಪರರ ಮನೆಗೆ ಹೋಗುವುದಕ್ಕೆ ನಾಚುವುದು ಸ್ವಭಾವವಲ್ಲವೆ ? ಆದರೂ ಮಾಡುವುದೇನು ? ಪರಸ್ಥಳದಲ್ಲಿ ಪರಗೃಹಕ್ಕೆ ಹೋಗಲಾರೆನೆಂದರೆ

ಹಸಿದಿರಬೇಕಲ್ಲವೆ ? ನಿರ್ವಾಹವಿಲ್ಲ. ಪಾಂಥರಿಗಾಗಿ ಧರ್ಮಾತ್ಮರು ಅನ್ನಸತ್ರವನ್ನಿಟ್ಟಿರುವರು. ಅಲ್ಲಿಗೆ ಹೋಗಲೇಬೇಕು. ಪರೋಪಕಾರ ನಿರತರಾದವರು ಅನ್ನಸತ್ರಗಳನ್ನೇ ಇಟ್ಟಿರುವರು !

ಹೀಗೆ ಯೋಚಿಸುತ್ತ ಕಡೆಗೆ ಹಸಿವು ಬಾಯಾರಿಕೆ ಬಳಲಿಕೆಗಳನ್ನು ತಡೆಯಲಾರದೆ ಸತ್ರದ ಒಳಹೊಕ್ಕನು. ಆ ಸತ್ರದಲ್ಲಿ ಒಬ್ಬ ಮುದುಕಿ ಇದ್ದಳು. ಅವಳ ಗುಣಗಳನ್ನು ಈಗ ವರ್ಣಿಸಬೇಕಾಗಿಲ್ಲವು. ಏಕೆಂದರೆ ಅವಳ ನಡತೆಯೇ ಅವಳ ಗುಣವನ್ನು ವ್ಯಕ್ತಪಡಿಸುವುದು. ಸತ್ರಕ್ಕೆ ಬರತಕ್ಕವರಲ್ಲಿ ಧನವಂತರೆಂದು ತೋರಿಬಂದವರೊಳಗೆ ಈ ಮೋಸಗಾತಿಯ ಪಾಶಕ್ಕೆ ಸಿಕ್ಕದಿದ್ದವರು ವಿರಳವೆನ್ನಬಹುದು ! ಆ ಮುದಿಮಾರಿಯ ದೃಷ್ಟಿಗೆ ಧನಿಕರು ಕುರಿಗಳೋ ? ಕೋಣಗಳೋ ? ಕೋಳಿಗಳೋ ? ಹೇಗಾದರೂ ಇರಲಿ, ಈಗ ಬಂದಿರುವ ಮನುಷ್ಯನು ಮಹಾರಾಜಲಕ್ಷಣಂಗಳುಳ್ಳವನು ! ಅಮೂಲ್ಯವಾದ ಆಭರಣಗಳುಳ್ಳವನು ! ಸುಂದರವಾದ ಕುದುರೆಯುಳ್ಳವನು ! ಇದೆಲ್ಲವನ್ನೂ ನೋಡಿ, ಸ್ವಲ್ಪಹೊತ್ತಿನಮೇಲೆ ಆ ಮುದುಕಿ, ಹೇಗಾದರೂ ಇವನ ಸರ್ವಸ್ವವನ್ನೂ ಕಸಿಯಬೇಕೆಂಬದುರಾಶೆಯುಳ್ಳವಳಾಗಿ ಈತನಿದ್ದೆಡೆಗೆ ಬಂದು ಅತಿವಿನಯದಿಂದ, "ಮಹಾತ್ಮನೆ ! ನಿನ್ನ ಊರಾವುದು ? ಎಂದಳು"

ವಿಜಯ—ತಾಯೆ ! ಮಾಗಧವೆಂಬ ದೇಶವೊಂದುಂಟು, ಅದರಲ್ಲಿ ಕುಸುಮಪುರ !

ಮುದುಕಿ—ನೀವಾವವರ್ಣಜರು ? ನಿಮ್ಮ ಆಕಾರವನ್ನುನೋಡುತ್ತಲೇ ಉತ್ತಮ ವರ್ಣದವರೆಂದು ತೋರುವುದು. ಆದರೂ ಸಂಶಯ ಪರಿಹಾರಕ್ಕಾಗಿ, ಮತ್ತೆ ಕೇಳುವೆನು ? ಕ್ಷಮಿಸಿರಿ !

ವಿಜಯ—ನಾನು ರಾಜಬಂಧುವು !

ಮುದುಕಿ—ಮಧ್ಯಾಹ್ನದ ಊಟವೆಲ್ಲಿ ಆದುದು ?

ವಿಜಯ—ಮಧ್ಯಾಹ್ನ ಊಟವಿಲ್ಲವು ! ಈಗಲೂ ಹಾಗೆಯೇ ಆಗುವಂತಿದೆ. ನನ್ನಲ್ಲಿ ನಾಣ್ಯವಿಲ್ಲ ! ಆವುದಾದರೊಂದು ಒಡವೆಯನ್ನಾದರೂ ಮಾರಿ ಆಹಾರ ಸಾಮಗ್ರಿಗಳನ್ನು ಒದಗಿಸಿಕೊಳ್ಳುವೆನೆಂದರೆ ಈಗ ಕತ್ತಲೆ !

ಮುದುಕಿ—ಮಹಾತ್ಮನೆ! ಈ ಸತ್ರವು ಜನದನಗಳು ಇಳಿಯುವುದಕ್ಕೆ ಮಾತ್ರವೇ ಕಟ್ಟಿರುವುದು. ಇದರಲ್ಲಿ ಅತಿಥಿಗಳಿಗೆ ಅನ್ನವನ್ನಿಡುವಂತೆ ಮಾಡಿಲ್ಲವು.

ವಿಜಯ—ಕೆಲವರು ಸತ್ರಗಳನ್ನು ತಮಗೂ ಇತರರಿಗೂ ಸಹಾಯವಾಗುವಂತೆ ಕಟ್ಟುವರು, ಕೆಲವರು ತಮ್ಮ ಆದಾಯವನ್ನೇ ಬಯಸಿ ಕಟ್ಟುವರು, ಕೆಲವರು ಸ್ವಾರ್ಥಾಭಿಲಾಷೆಯಿಲ್ಲದೆ ಪರಾರ್ಥಕ್ಕಾಗಿಯೇ ಕಟ್ಟುವರು.

ಮುದಕಿ—ಅಯ್ಯಾ ! ಸ್ವಾರ್ಥಾಭಿಲಾಷೆಯಿಲ್ಲದವರೂ ಇರುವರೆ ?

ವಿಜಯ—ಇರುವರು ! ಸತ್ರವನ್ನು ಕಟ್ಟಿ ಸ್ವಂತ ವೆಚ್ಚದಿಂದ ಸತ್ರಕ್ಕೆ ಬಂದವರಿಗೆ ಅನ್ನೋದಕಂಗಳನ್ನು ಕೊಟ್ಟು ಸತ್ಕರಿಸುವವರು ಸ್ವಾರ್ಥತ್ಯಾಗಿಗಳಲ್ಲವೆ ? ಅಂತಹವರು ಕೂಡ ಬಂದೊಂದು ವೇಳೆ ಪಕ್ಷಪಾತಿಗಳೆಂದು ದೂಷಿಸಲ್ಪಡುವರು. ಅದಂತಿರಲಿ ! ಕೆಲವರು ದನಗಳಿಗೂ ಜನಂಗಳಿಗೂ ಅನುಕೂಲವಾಗಿರುವಂತೆ ಸತ್ರಗಳನ್ನು ಕಟ್ಟುವರು ಅದು ಇತರರಿಗೆ ಅನುಕೂಲವಾದುದಾದರೂ ಅದರಲ್ಲಿನ ಕಸಕಡ್ಡಿಗಳ ಆಶೆಗಾಗಿ ಕಟ್ಟಿಸಿರುವರೆಂದೆನ್ನಿಸಿಕೊಳ್ಳುವರು, ಮತ್ತೆ ಕೆಲವರು ದನಗಳಿಗೊಂದಕ್ಕೇ ಅನುಕೂಲವಾಗಿರಲೆಂದು ಕಟ್ಟುವರು ; ಅದು ಗೊಬ್ಬರವನ್ನಾರ್ಜಿಸುವುದಕ್ಕಲ್ಲದೆ ಮತ್ತೇನು ? ಅದರಿಂದ ಇತರರಿಗೆ ಸಹಾಯವಿಲ್ಲದೆ ಇಲ್ಲವು. ಆದರೂ ಸ್ವಾರ್ಥಾಭಿಲಾಷೆಯು ಹೆಚ್ಚಾಯಿತಲ್ಲವೆ? ಕೆಲವರು ಲಕ್ಷಾಂತರರೂಪಾಯಿಗಳನ್ನು ವೆಚ್ಚಮಾಡಿ ಬಹು ಚೆನ್ನಾಗಿ ಕಟ್ಟಿಸುತ್ತಾರೆ. ಅದು ರಾಜಾಧಿರಾಜರಿಗಲ್ಲದೆ ಸಕಲ ಜನರಿಗೂ ನೋಡುವುದಕ್ಕೆ ಸಂತೋಷದಾಯಕವಾಗಿರುವುದು. ಅದರಲ್ಲಿ ಬಡವರನ್ನು ಬಿಟ್ಟರೆ ಕೆಲವು ದಿನಂಗಳಿಗೆ ಅನುವು ಕೆಡುವುದೆಂಬ ಶಂಕೆಯಿಂದ ಬಡವರನ್ನು ಸೇರಲಿಸದಿರಬೇಕಾಗುವುದು. ಆಗ ಆ ಧಾರ್ಮಿಕನು ಆ ಸತ್ರದಲ್ಲಿರತಕ್ಕ ಧನಿಕರ ಮತ್ತು ಅಧಿಕಾರಿಗಳ ಸ್ತೋತ್ರಕ್ಕೆ ಪಾತ್ರನಾಗುವನಲ್ಲದೆ ಲೋಕಕ್ಕೆ ಏನು ಸಹಾಯ ಮಾಡಿದಂತಾಯಿತು ? ಆವಾಗಲೂ ರಿಕ್ತನಾದವನಿಗೆ ಆವ ಸಹಾ

ಯಮಾಡಿದರೂ ಸಂತೋಷಿಸುವನು. ತನಗೆ ಶ್ರೇಯಸ್ಸನ್ನು ಕೋರುವನು. ಧನಮದಾಂಧರಿಗೆ ಎಷ್ಟು ಸಹಾಯಮಾಡಿದರೂ ನೀರಿನಲ್ಲಿ ಮಾಡಿದ ಹೋಮಕ್ಕೆ ಸಾಮ್ಯವಲ್ಲವೆ? ಹಸಿವಾಗಿರುವವನಿಗೆ ಊಟಕ್ಕಿಟ್ಟರೆ ಒಳ್ಳೆಯದೋ? ಉಂಡವನಿಗೆ ಉಣಬಡಿಸುವುದು ಒಳ್ಳೆಯದೋ? ಮನುಷ್ಯನು ಆವ ಮಾರ್ಗವನ್ನನುಸರಿಸಿದರೂ ಇತರರಿಂದ ಎಂದರೆ ಸರ್ವರಿಂದಲೂ ಸ್ತುತ್ಯನಾಗುವುದು ಅಸಾಧ್ಯ? ಹತ್ತುಜನರಲ್ಲಿ ಒಬ್ಬನಾದರೂ ಎಂತಹ ಧಾರ್ಮಿಕನನ್ನಾದರೂ ಎಂತಹವನನ್ನಾದರೂ ದೂಷಿಸಿಯೇ ದೂಷಿಸುವನು! ಆದರೆ ಆವಮನುಷ್ಯನಾದರೂ ತನ್ನ ಕಷ್ಟಾರ್ಜಿತದ್ರವ್ಯದಲ್ಲಿ ತನ್ನ ಸಂಸಾರಭರಣಕ್ಕಾಗಿ ಉಳಿದುದನ್ನು, ಲೋಭವಿಲ್ಲದೆ, ಸತ್ರ, ದೇವಾಲಯ, ಕೆರೆ, ಭಾವಿ, ತೋಪು, ಮಾರ್ಗ, ಗ್ರಂಥಪ್ರಸಾರಣೆ ಮೊದಲಾದ ಧರ್ಮಕೆಲಸಂಗಳಿಗೆ ಉಪಯೋಗಿಸಿದರೆ ಅದು ಸ್ವಲ್ಪವಾದರೂ ಇತರರಿಗೆ ಉಪಯೋಗಕರವಾಗುವುದರಿಂದ ಆತನನ್ನು ಧಾರ್ಮಿಕನೆನ್ನಲೇಬೇಕು!

ಮುದುಕಿ—ಮಹನೀಯನೆ! ಬಹಳಹೊತ್ತಾಯಿತು. ಈಗ ನಮ್ಮ ಮನೆಯಲ್ಲಿ ಊಟಮಾಡಿ, ನಾಳೆನಿಂದಲೂ ನಿನ್ನ ಇಷ್ಟವಂತೆ ವರ್ತಿಸಬಹುದು. ನಾನು ಬಡವಳಾದುದರಿಂದ ನನ್ನಿಂದ ಮಾಡಲ್ಪಡುವ ಸ್ವಲ್ಪವಾದ ಸತ್ಕೃತಿಯನ್ನು ಸ್ವೀಕರಿಸು!

ವಿಜಯ—ಹಾಗಾದರೆ ನಾನು ಬದುಕಿದೆನು.

ಮುದುಕಿ—ಬರಬಹುದು. (ಎಂದು ಆತನನ್ನು ಕರೆದುಕೊಂಡುಹೋಗಿ ತನ್ನ ಮನೆಯಲ್ಲಿ ಉಪಚರಿಸಿ ಅತ್ಯಾದರವಾದ ಮೃದುಮಧುರೋಕ್ತಿಗಳನ್ನಾಡುತ್ತಾ ಎಲೆಯಲ್ಲಿ ಅನ್ನವನ್ನು ಬಡಿಸಿದಳು).

ವಿಜಯ—(ತನ್ನ ಓಲೆಯಲ್ಲಿನ ಮೊದಲನೆಯವಾಕ್ಯವು, ಮನಸ್ಸಿಗೆ ಬಂದಿತು. ಅದರಂತೆ ತಾನು ಉಣ್ಣುವುದಕ್ಕೆ ಮೊದಲು ಒಂದು ಹಿಡಿ ಅನ್ನವನ್ನು ಬಳಿಯಲ್ಲಿದ್ದ ಬೆಕ್ಕಿನ ಮುಂದೆ ಹಾಕುವುದಕ್ಕೆ ಪ್ರಯತ್ನಪಟ್ಟು ಆ ಬೆಕ್ಕಿಗೆ ಕೈಸನ್ನೆಯನ್ನು ಮಾಡಿದನು)

ಮುದುಕಿ—ಹೋ! ಹೋ! ಆಯುಷ್ಮಂತನೆ! ಅದಕ್ಕೇಕೆ ಹಾಕುವೆ?

ಅದಕ್ಕೆ ಈ ದಿನ ವಿರೇಚನದ ಗುಳಿಗೆಯನ್ನು ಕೊಟ್ಟಿರುವೆನು. ಹಾಕಬೇಡ !

ವಿಜಯ—ತಾಯೆ ! ನಮ್ಮಂತೆ ಅದೂ ಒಂದು ಪ್ರಾಣಿ ! ಮತ್ತೊಂದು ಪ್ರಾಣಿಗೆ ಒಂದು ಹಿಡಿ ಅನ್ನವನ್ನಾದರೂ ಹಾಕಿದಲ್ಲದೆ ಉಣ್ಣುವ ಪದ್ಧತಿ, ನನಗಿಲ್ಲವು.

ಮುದುಕಿ—ಆ ಪದ್ಧತಿ ಪರಸ್ಥಳದಲ್ಲೇನು ? ನಿಮ್ಮ ಮನೆಯಲ್ಲಾದರೆ ಎಲ್ಲಾ ಪದ್ಧತಿಗಳು.

ವಿಜಯ—ತಾಯೆ ! ಹೊಟ್ಟೆಗೆ, ಅನ್ನಕ್ಕೆ, ಸ್ಥಳ ಪರಸ್ಥಳವೆಂಬ ಭೇದ ವಿರುವುದೆ ? ಮನಸ್ಸಿಗಲ್ಲವೆ ?

ಮುದುಕಿ—ಹಾಗಾದರೆ ನೀನು ಅ ಧಿ ಕ ಪ್ರ ಸಂ ಗಿ ! ನಮ್ಮಂತಹ ವರ ಸಂಗದಲ್ಲಿರತಕ್ಕವನಲ್ಲವು.

ವಿಜಯ—ತಾಯೆ ! ನಿನಗೆ ಇಷ್ಟು ಕೋಪವೇಕೆ ? ನನಗೀದಿನ ಊಟವೇ ಬೇಡ (ಎಂದು ಏಳುವ ಪ್ರಯತ್ನದಲ್ಲಿರುವನು)

ಮುದುಕಿ—ಮಹಾತ್ಮನೆ ! ಕೋಪಿಸಬೇಡ, ಕ್ಷಮಿಸು ! ನಾನು ಲೋಕ ಸಾಮಿತಿ ಮಾತನ್ನು, ಹೇಳಿದೆನಲ್ಲದೆ ನಿನಗಲ್ಲವು. ನೀನು ಎಷ್ಟು ಅನ್ನವನ್ನು ಇತರ ಪ್ರಾಣಿಗೆ ಹಾಕಬೇಕೆಂದಿರುವೆಯೋ ಅಷ್ಟನ್ನೂ ಒಂದೆಲೆಯಲ್ಲಿ ಬೇರೆತೆಗೆದಿಡು ! ಅದರ ಮೇಲೆ ಒಂದು ಪಾತ್ರೆಯನ್ನು ಮುಚ್ಚಿಟ್ಟದ್ದು ಬೆಳಗ್ಗೆ ಬೆಕ್ಕಿಗಾಗಲಿ ನಾಯಿಗಾಗಲಿ ಹಾಕುವೆನು.

ವಿಜಯ—ನಿಮ್ಮ ಮನೆಯಲ್ಲಿ ನಾಯಿಯೂ ಇದೆಯೋ ?

ಮುದುಕಿ—ಇದೆ ! ಮನೆಯ ಮುಂದೆಯೇ ಇರುವುದಲ್ಲಾ ? ನೀನು ಬರುವಾಗ ನಿನ್ನನ್ನು ಕಂಡು ಹೊಸಬನೆಂದರಿತು ಗುರುಗುಟ್ಟಲಿಲ್ಲವೇ ?

ವಿಜಯ—ಸರಿ ! ಹಾಗಾದರೆ ನಿಮ್ಮ ಆಸ್ತಿಯನ್ನು ಚೆನ್ನಾಗಿ ಕಾಪಾಡುವುದು ?

ಮುದುಕಿ—ಬಹು ಎಚ್ಚರಿಕೆಯುಳ್ಳುದದು !

ವಿಜಯ—ತಾಯೆ ! ಈ ಬೆಕ್ಕಿಗೆ ಈಗ ಈ ಅನ್ನವನ್ನು ಹಾಕಲೇ ಬಾರದೋ ?

ಮುದುಕಿ—ನಿಜವಾಗಿ ವಿರೇಚನದ ಗುಳಿಗೆಯನ್ನು ಕೊಟ್ಟಿರುವೆನು.

ವಿಜಯ—ಹಾಗಾದರೆ ಹೊರಗಿರುವ ನಾಯಿಗಾದರೂ ಹಾಕಿ ಬರುವೆನು.

(ಎಂದು ಅನ್ನವನ್ನು ತೆಗೆದುಕೊಂಡು ಏಳುವನು)

ಮುದುಕಿ—ಅದಕ್ಕೂ ಈಗಬೇಡ! ಅಗಲೇ ಅದಕ್ಕೆ ತಕ್ಕಷ್ಟು ಮಜ್ಜಿಗೆಯಿಂದ ಕಲಸಿದ ಅನ್ನವನ್ನು ಹಾಕಿದ್ದೇನೆ. ಮತ್ತೆ ಹಾಕಿದರೆ ಕೊಬ್ಬಿ, ತನ್ನ ಕಾರ್ಯದಲ್ಲಿ ನಿರ್ಲಕ್ಷ್ಯವುಳ್ಳುದಾಗುವುದು. ಆ ಕೆಟ್ಟ ಕೆಲಸವನ್ನು ನಾವೇ ಕಲಿಸಿಕೊಟ್ಟಂತೆ ಆಗುವುದಿಲ್ಲವೆ?

ವಿಜಯ—(ಮನಸ್ಸಿನಲ್ಲಿ) ಈಗೇನುಮಾಡಲಿ? ಆವುದಕ್ಕೂ ಆಸ್ಪದವನ್ನು ಕೊಡಳು. ಈಕೆಯ ಮಾತುಗಳಿಂದ ನನಗೆ ಏನೋ ಒಂದು ವಿಧವಾದ ಅನುಮಾನವೂ ಭಯವೂ ಅಂಕುರಿಸಿರುವುವು. ಅನ್ನ ದಾತಳಾದ ಈಕೆಯ ವಚನವು ಮೀರತಕ್ಕದಲ್ಲವು. ಆದರೆ ಈಕೆಯ ನಡೆನುಡಿಗಳಿಂದ ಅನುಮಾನ ತೋರುವುದರಿಂದಲೂ, ನಾನು ಪರೀಕ್ಷಿಸಬೇಕೆಂದು ನಿರ್ಧರಿಸಿರುವ ಪತ್ರದ ಪ್ರಥಮಾಂಶದಿಂದಲೂ, ಈ ಹಿಡಿಯನ್ನವನ್ನು ಇತರ ಪ್ರಾಣಿಗೆ ಹಾಕದೆ ಇರಲಾರೆನು. ಆದುದಾಗಲಿ! ನೋಡೋಣ! ಎಂದು ಕೈಯಲ್ಲಿದ್ದ ಅನ್ನಕ್ಕೆ ತುಪ್ಪವನ್ನು ಬೆರೆಯಿಸುತ್ತಾ, ಮುದುಕಿಯನ್ನು ಕುರಿತು (ಪ್ರಕಾಶಂ) ತಾಯೆ! ನೀನು ಕೋಪಿಸಬೇಡ; ನನ್ನಲ್ಲಿ ಉತ್ತಮವಾದ ಔಷಧಂಗಳಿವೆ. ನಿನ್ನ ಬೆಕ್ಕಿಗೆ ಆವ ರೋಗ ಬಂದಿದ್ದರೂ ಪರಿಹರಿಸುವೆನು. ಯೋಚಿಸಬೇಡ! ನನ್ನ ಆಜನ್ಮ ಪದ್ಧತಿಯಾದ ಇದನ್ನು ಬಿಡಲಾರೆನು. ಎಂದು ಬೆಕ್ಕಿನ ಮುಂದಕ್ಕೆ ಹಾಕಿದನು, ಅದು ಆತುರದಿಂದ ಆ ತುತ್ತಿಗೆ ಬಾಯಿಹಾಕಿ ಕಚ್ಚಿಕೊಂಡು ಓಡಿತು!

ಮುದುಕಿ—ಹಾಹಾ! ಎಂದು ಬೆಕ್ಕಿನ ಬಳಿಗೆ ಓಡಿಬಂದು ಅದರ ಬಾಯಿಗೆ ಕೈ ಹಾಕಿ ಬಾಯಿಯೊಳಗಿನ ಅನ್ನವನ್ನೂ ಕಿತ್ತುಹಾಕುತ್ತಾ, ವಿಜಯಸೇನನನ್ನು ಕುರಿತು, "ಎಂತಹ ಗಟ್ಟಿಗ! ಎಂತಹ ದುಷ್ಟ! ಎಂತಹ ನೀಚ! ಎಷ್ಟು ಹೇಳಿದರೂ ಕೇಳಲಿಲ್ಲ!"(ಎಂದು ಬಯ್ಯುತ್ತಿದ್ದಳು) ಅದುವರೆಗೆ ಆ ಬೆಕ್ಕು ಅರ್ಧ ತುತ್ತನ್ನು ನುಂಗಿದ್ದಿತು.

ಅದರ ಪ್ರಭಾವದಿಂದಲೇ ಗರಗರನೆ ಸುತ್ತುತ್ತಾ, ಹಲ್ಲುಗಳು ಕಿರಿಯುತ್ತಾ, ದೀನಸ್ವರದಿಂದ ಅರಿಚುತ್ತಾ, ಹಾರಿಹಾರಿ ಬೀಳುತ್ತಾ, ನೆಲವನ್ನು ಮೂಸಿನೋಡುತ್ತಾ, ಸ್ವಲ್ಪಹೊತ್ತಿನೊಳಗಾಗಿಯೇ ಮೃತ್ಯುವಿನ ಬಾಯ್ಗೆ ತುತ್ತಾಯಿತು. ಇದನ್ನು ನೋಡಿದ ವಿಜಯಸೇನನು ಈ ಅನ್ನದಲ್ಲಿ ಏನೋ ಕೃತ್ರಿಮವನ್ನು ನಡೆಯಿಸಿ ಇರುವುದು ನಿಜವೆಂದು ನೆನೆದು ಅದನ್ನು ತಿನ್ನದೆ ಎದ್ದು ಅವಳನ್ನು ಗ್ರಾಮಾಧಿಕಾರಿಯ ಬಳಿಗೆ ಕರೆದುಕೊಂಡು ಹೋಗಿ ನಡೆದ ಸಂಗತಿಯನ್ನೆಲ್ಲಾ ಅರಿಕೆಮಾಡಿ ಅವಳನ್ನು ಆ ಅಧಿಕಾರಿಗೆ ಒಪ್ಪಿಸಿ, ಆಗ್ಗೆ ಆ ಗ್ರಾಮಾಧಿಕಾರಿಯ ಮನೆಯಲ್ಲಿ ಉಂಡು, ಬೆಳಗ್ಗೆ ಎದ್ದು ಮುಂದಕ್ಕೆ ಪ್ರಯಾಣಮಾಡಿದನು.

ಪ್ರಯಾಣವಾಗಿ ಹೋಗುತ್ತಿರಲು ಒಂದು ನಗರವು ದೃಗ್ಗೋಚರವಾಯಿತು. ಅದುವರೆಗೆ ಮಧ್ಯಾಹ್ನವಾಯಿತು. ವಿಜಯಸೇನನಿಗೆ ಅತ್ಯಾಯಾಸವಾಯಿತು. ಆತನ ಕುದುರೆಯು ಮುಂದಕ್ಕಡಿಯಿಡಲಾರದಂತಾಯಿತು. ಆದಿನವೆಲ್ಲಿ ಇರಬೇಕೆಂಬ ಚಿಂತೆಯುಂಟಾಯಿತು. ಆ ನಗರವನ್ನುಳಿದು ಮತ್ತೆಲ್ಲಿಗೆ ಹೋಗಲಿಕ್ಕೂ ದಿಕ್ಕೇ ತೋರದಾಯಿತು. ಬಾಯಾರಿಕೆಯಧಿಕವಾಯಿತು. ಹಸಿವೆಯ ಬಾಧೆ ಅಸಾಧ್ಯವೆನಿಸಿತು. ಆದುದರಿಂದಾನಗರವನ್ನೇ ಪ್ರವೇಶಿಸಬೇಕಾಯಿತು. ಮಾರ್ಗದ ಕೆಲದಲ್ಲಿದ್ದ ಅತ್ಯಂತ ಸುಂದರವಾದ ಒಂದು ಸೌಧದ ಬಾಗಿಲ ಮುಂದಿದ್ದ ದೊಡ್ಡ ಭೇರಿಯ ಮುಂದೆ “ ಧೀರರು ಅದರಮೇಲೆ ಒಂದೇಟನ್ನು ಹಾಕು ” ! ಎಂದಿದ್ದಿತು. ಅದನ್ನು ನೋಡಿ ಅಭಿಜಾತ್ಯಾನುರೂಪವಾದ ಧೈರ್ಯದಿಂದ ಒಂದು, ಎರಡು, ನಾಲ್ಕು, ಹತ್ತು, ಏಟುಗಳನ್ನು ಹಾಕಬೇಕಾಯಿತು. ಆ ಸೌಧದ ಯಜಮಾನಿಯಾದ ಸುಂದರಿ ಎಂಬ ಗಣಿಕೆಯು ಅತ್ಯಾಶೆಯಿಂದ ಬಂದೀತನಿಗೆ ತಕ್ಕ ರಾಜೋಪಚಾರಂಗಳನ್ನು ಮಾಡಿ ಒಳಕ್ಕೆ ಕರೆದುಕೊಂಡು ಹೋಗಬೇಕಾಯಿತು. ಬಳಿಕ ಮಧ್ಯಾಹ್ನದ ಭೋಜನಕ್ಕೆ ಆಕೆಯ ಆಜ್ಞೆಯಂತೆ ಉಚಿತವಾದ ಸ್ಥಳದಲ್ಲಿ ಸಿದ್ಧವಾಯಿತು. ಈತನು ಆಗ ಅಲ್ಲಿ ಭುಂಜಿಸಿ ಆ ಸುಂದರಿಯೊಡನೆ ಸಂಜೆಯುವರೆಗೂ ಸುಖಸಂಕಥಾಲಾಪಂಗಳಿಂದ ಕಾಲವನ್ನು ಕಳೆದುದಾಯಿತು. ಇವನ ಮುಖವನ್ನೂ ಇವನು ಧರಿಸಿದ್ದ ಅನರ್ಘ್ಯವಸ್ತ್ರಾಭರಣಂಗಳನ್ನೂ ಕಂಡು ಆ ಗೋಮುಖ

ವ್ಯಾಘ್ರದಂತಿರುವ ಗಣಿಕೆಗೆ ಇವನನ್ನು ಸಂಹರಿಸಿ ಇವನ ಸಮಸ್ತ ವಸ್ತು ತತಿಯನ್ನೂ ಅಪಹರಿಸಬೇಕೆಂಬ ಅತ್ಯಾಶೆಯಂಕುರಿಸಿತು. ಅದು ವರೆಗೆ ರಾತ್ರಿಯಾಯಿತು. ರಾತ್ರಿಯ ಊಟವಾಗುವ ಹೊತ್ತಿಗೆ ಶಯ್ಯಾಗಾರವಲಂಕರಿಸಲ್ಪಟ್ಟಿತು. ಆ ಘಾತುಕಿಯ ನಿಯಾಮಕದಂತೆ ಕೃತಕ ಪರ್ಯಂತದ ಅಲಂಕೃತಿಯೂ ಮಾಡಿದುದಾಯಿತು. ವಿಜಯಸೇನನು ಭೋಜನಾನಂತರ ಬಂದಮೇಲೆ ಫಲಹಾರ ತಾಂಬೂಲಾದಿಗಳು ಗಣಿಕೆಯಿಂದ ಅರ್ಪಿಸಲ್ಪಟ್ಟು, ತತ್ಕಾಲೋಚಿತ ಸುಖಭೋಜನಂಗಳನುಭವಿಸಲ್ಪಟ್ಟು ಆತನ ಮನವಾನಂದ ಮಗ್ನವಾಯಿತು. ಬಳಿಕ ಅಲಂಕೃತವಾಗಿದ್ದ ಆ ಕೃತಕಪರ್ಯಂತದಮೇಲೆ ಸುಖವಾಗಿ ನಿದ್ರಿಸಬೇಕೆಂಬ ಪ್ರಾರ್ಥನೆಯು ಅಂಗೀಕರಿಸಲ್ಪಟ್ಟಿತು. ಅದುವರೆಗೆ ಆ ಮಹೀಭುಜನಿಗೆ ತಾನು ಬಂದ ಕಾರ್ಯವು ನೆನಪಿಗೆ ಬಂದಿತು. ಓಲೆಯ ಎರಡನೆಯ ವಾಕ್ಯವು ಇತ್ಯರ್ಥವಾಗಬೇಕೆಂದು ಯೋಚಿಸಿ, ಆ ಪರ್ಯಂತದ ಬಳಿಗೆ ಹೋಗಿ ಓಲೆಯ ಎರಡನೆ ಸೂಚನೆಯಂತೆ ನೆರವೇರಿಸಿದನು. ಒಡನೆಯೇ ಆ ಪರ್ಯಂಕವು ಅದರಡಿಯಿದ್ದ ಅಗಾಧವಾದ ಗುಳಿಯಪಾಲಾಯಿತು. ಆಗ ಕ್ರೂರಳಾದ ಆ ವಾರಾಂಗನೆಯ ನೀಚಕೃತ್ಯವು ರಟ್ಟಾಗಲು, ಆ ವಿಷಯವನ್ನು ಆ ನಗರದ ನ್ಯಾಯಾಧಿಪತಿಯೊಡನೆ ಹೇಳಲು ಆಗಲೇ ವಿಚಾರಣೆಯಾಗಿ ಇದರ ನಿಜಸ್ಥಿತಿಯನ್ನು ನ್ಯಾಯಾಧಿಪತಿಯೂ ತಿಳಿದು ಆ ವಾರನಾರಿಯ ಸರ್ವಸ್ವವನ್ನೂ ರಾಜಭಂಡಾರಕ್ಕೆ ಸೇರಿಸಿ ಅವಳಿಗೆ ಮರಣದಂಡನೆಯನ್ನು ವಿಧಿಸಿದನು. ಓಲೆಯ ಎರಡನೆಯ ವಾಕ್ಯದಂತೆ ನಡೆದುದರ ಪರಿಣಾಮವಿಂತಾಗಲು ; ಓಲೆಯ ಮೂರನೆಯ ವಾಕ್ಯವನ್ನು ನೆನಪಿಗೆ ತಂದು ಮರುದಿನದ ಉದಯದಲ್ಲಿ ಹೊರಡಲು ಅನುವಾದವು.

ಬೆಂಗಾಡು ಎಂಬುದೊಂದು ಊರು ! ಆ ಗ್ರಾಮದ ಎಲ್ಲೆಯಲ್ಲಿ ಧೂಮಶಕಟ (ರೈಲ್ವೆ) ದ ಮಾರ್ಗವಿರುವುದು. ಆ ಗ್ರಾಮಕ್ಕೆ ಅನತಿ ದೂರದಲ್ಲಿ ಅದೇ ಹೆಸರಿನ ನಿಲ್ದಾಣ ! ಆ ನಿಲ್ದಾಣದಲ್ಲಿ ಒಬ್ಬ ಅಧಿಕಾರಿಯೂ, ಮೂರು ಜನ ಸೇವಕರೂ ಇರುವರು. ಆ ನಿಲ್ದಾಣಕ್ಕೆ ಅರ್ಧ ಕ್ರೋಶದ ವರೆಗೂ ಆವ ಊರೂ ಇಲ್ಲ ! ಜನ ಸಂಚಾರವೂ ವಿಶೇಷವಾಗಿಲ್ಲ ! ಆ ನಿಲ್ದಾಣದ ಪಕ್ಕದಲ್ಲಿಯೇ ಜನ ಮತ್ತು ಬಂಡಿಗಳೂ ತಿರುಗ

ತಕ್ಕ ಮಾರ್ಗವಿರುವುದು. ಆ ಮಾರ್ಗವನ್ನನುಸರಿಸಿ ವಿಜಯಸೇನನು ಬರುತ್ತಿರುವಲ್ಲಿ ಆ ನಿಲ್ದಾಣದ ಬಳಿಗೆ ಬರುವ ಹೊತ್ತಿಗೆ ಸಂಧ್ಯಾಕಾಲ ವಾಯಿತು. ಅದು ಕಾಡುದಾರಿಯಾದುದರಿಂದ ಮುಂದೆ ಹೋಗಲಾರದೆ ಆ ನಿಲ್ದಾಣದಲ್ಲಿಯ ಒಂದು ಮನೆಯಲ್ಲಿ ಆ ರಾತ್ರಿ ನಿಲ್ಲುವುದಕ್ಕೆ ಸ್ಥಳ ವನ್ನು ಕೊಡಬೇಕೆಂದು ಅಧಿಕಾರಿಯನ್ನು ಪ್ರಾರ್ಥಿಸಲು ಆತನು ಆಗು ವುದಿಲ್ಲವೆಂದು ಹೇಳಿದುದಕ್ಕೆ ಅದರ ಪಕ್ಕದಲ್ಲಿಯೇ ಹೊರಭಾಗದಲ್ಲಿ ತಾನು ಇಳಿದುಕೊಂಡನು. ಇವನಿಳಿದಿರುವ ಸಂಗತಿ ಆ ಅಧಿಕಾರಿಗೆ ಗೊತ್ತಾಗಲಿಲ್ಲ. ಮುಂದಕ್ಕೆ ಹೊರಟುಹೋದನೆಂದು ತಿಳಿದಿದ್ದನು. ಆಗ್ಗೆ ರಾತ್ರಿ ಸುಮಾರು ಎಂಟು ಘಳಿಗೆ ಹೊತ್ತಾಗಿರಬಹುದು ; ಧೂಮಶಕ ಟವು ದಡದಡನೆ ಬಂದು ಪದ್ಧತಿಯಂತೆ ಅಲ್ಲಿ ಸ್ವಲ್ಪ ಹೊತ್ತು ನಿಂತಿತು. ಆ ಬೆಂಗಾಡಿನಲ್ಲಿ ಇಳಿಯುವರಾರೂ ಇರಲಿಲ್ಲವು. ಒಬ್ಬ ತರುಣಿ ಮಾತ್ರ ತಾನು ಮುಂದಕ್ಕೆ ಪ್ರಯಾಣಮಾಡತಕ್ಕವಳಾದರೂ ದೇಹಬಾ ಧೆಗೋ ಏತಕ್ಕೋ ಕೆಳಗೆ ಇಳಿದು ಇದ್ದಳು. ಆಕೆಯ ಕಂಕುಳಲ್ಲಿ ಸಣ್ಣ ಮಗು ವೊಂದಿದ್ದಿತು. ತನ್ನ ಕಾರ್ಯವನ್ನು ಪೂರೈಸಿಕೊಂಡು ನಿಜಸ್ಥಳಕ್ಕೆ ಬರುವ ವೇಳೆಗೆ “ ಕೊಯ್ ”!! ಎಂದು ಅರಿಚುತ್ತಾ ಬಂಡಿ ಮುಂದಕ್ಕೆ ಸಾಗಿತು. ಹಾಗಾದರೂ ತಾನು ಹತ್ತಿ ಕುಳಿತುಕೊಳ್ಳು ವಷ್ಟು ಶಕ್ತಳಾಗಿದ್ದರೂ ಕೂಡಾ ಕಂಕುಳಲ್ಲಿ ಎಳೆಯ ಮಗುವಿದ್ದುದ ಕ್ಕಾಗಿ ಮಗುವು ಕೆಳಕ್ಕೆ ಜಾರೀತೆಂಬ ಅಂಜಿಕೆಯಿಂದ ಬಂಡಿಯನ್ನು ಮುಟ್ಟುವುದಕ್ಕೆ ಭಯಪಟ್ಟು ನಿಂತಳು. ಅಲ್ಲಿಗೆ ಹತ್ತು ಗಳಿಗೆ ಹೊತ್ತಾ ಗಿದ್ದಿತು. ಇನ್ನೇನುಗತಿ ? ತನ್ನ ಹಿತಚಿಂತಕರು ಮುಂದೆ ಹೊರಟು ಹೋದರು ! ಎಂದು ಗೋಳಾಡುತ್ತಾ ಕುಳಿತಳು. ಅವಳ ಬಂಧುಗಳು ಅವಳಿಗಾಗಿ ಬಂಡಿಯಲ್ಲಿ ಗೋಳಾಡುತ್ತಿದ್ದರು. ಅವರ ಮಾತು ಹಾಗಿ ರಲಿ ! ಅರಣ್ಯಪ್ರದೇಶ ! ಹಿತಚಿಂತಕರಾರೂ ಇಲ್ಲ ! ತಾನು ಅಬಲೆ ! ಎಳೆಯ ಮಗುವಿನದೊಂದು ತಂಟೆ ! ಇಷ್ಟೆಲ್ಲಾ ಹೇಗಾದರೂ ಸಹಿಸಬ ಹುದೆಂದರೆ, ಸ್ತ್ರೀಯರ ಪಾತಿವ್ರತ್ಯಕ್ಕೆ ಪ್ರತ್ಯರ್ಥಿಯಾದ ಸೌಂದರ್ಯ! ಅದಕ್ಕೆ ಸಹಕಾರಿಯಾದ ನವಯೌವನ ! ಅವುಗಳ ಸಹಾಯಕ್ಕೆ ಸುಸ್ವರ! ಸಸೈನ್ಯಪರಿವೃತವಾದ ಪ್ರತ್ಯರ್ಥಿಯನ್ನು ಪಾತಿವ್ರತ್ಯವೊಂದೇ ಎದು ರಿಸಿ ಗೆಲ್ಲುವುದು ಅಸಾಧ್ಯವಲ್ಲವೆ ? ಮನಸ್ಸೆಂಬ ಒಬ್ಬ ಸೇವಕನ ಅಭಿ

ಮಾನವು ಪಾತಿವ್ರತ್ಯದ ಕಡೆ ಇದ್ದರೆ ಇವುಗಳ ಹತ್ತರಷ್ಟು, ನೂರ ರಷ್ಟು, ಸೈನ್ಯಾವೃತವಾದ ಪ್ರತ್ಯರ್ಥಿಯನ್ನಾದರೂ ಗೆಲ್ಲಬಹುದು. ಮನ ಸ್ಸೊಂದು ಮಾತ್ರ, ಚಾಂಚಲ್ಯವೆಂಬ ತನ್ನೊಡನಾಡಿಯಾದ ವೈರಿಯ ರಾಯಭಾರಿಯ ಸವಿನುಡಿಗೆ ಮರುಳಾದರೆ ಎಂದಿಗೂ ಸ್ತ್ರೀಯರಿಗೆ ಪಾತಿ ವ್ರತ್ಯದ ವಿಜಯದಿಂದ ಉಂಟಾಗುವ ಸತ್ಕೀರ್ತಿ ಪುಣ್ಯಂಗಳು ಲಭಿಸಲಾರ ವೆಂಬುದು ನಿರ್ಧರವಾದುದು !

ಆ ಒಬ್ಬಳಾಗಿ ಇಳಿದು ಗೋಳಾಡುವ ತರುಣೀಮಣಿಯ ಸಂಕಟ ವನ್ನು ನೋಡಿ ಆ ನಿಲ್ದಾಣದ ಅಧಿಕಾರಿ ಸವಿನುಡಿಯಿಂದ ಆದರಿಸಿ ಅವ ವಿಷಯವಾಗಿಯೂ ಆಲೋಚಿಸಬೇಡವೆಂದು ಉಪಚರಿಸಿ, ಮಗುವಿಗೂ ಆಕೆಗೂ ಆಹಾರವನ್ನು ಒದಗಿಸಿಕೊಟ್ಟು, ಆ ನಿಲ್ದಾಣದಲ್ಲಿನ ಒಂದು ಕಿರುಮನೆಯನ್ನು ಆಕೆಗೆ ಬಿಡಿಸಿಕೊಡಲು, ಅವಳು ಇದ್ದುದರಲ್ಲಿ ಸಮಾ ಧಾನಹೊಂದಿ ಅಲ್ಲಿ ಮಗುವಿನೊಡನೆ ಮಲಗಿ ನಿದ್ರೆಮಾಡುತ್ತಿದ್ದಳು.

ಆ ನಿಲ್ದಾಣದ ಅಧಿಕಾರಿಯ ಮಾತುಗಳಿಂದಲೂ, ಆತನ ಸದುಪ ಚಾರಂಗಳಿಂದಲೂ ತತ್ಕಾಲದ ನಡೆವಳಿಕೆಗಳಿಂದಲೂ ಆತನು ಉತ್ತಮ ನೆಂದು ತೋರುತ್ತಿದ್ದಿತು.

ಆತನಿಗೆ ಆಗ ಇಪ್ಪತ್ತೈದು ವರುಷ ವಯಸ್ಸು ! ಆಗತಾನೆ ಹೊಸ ಹೊಸದಾಗಿ ಕರಿಯ ಮೀಸೆಯು ಕಾಣಿಸುತ್ತಿದ್ದಿತು. "ಮೀಸೆ ಬರುವ ವನು ದೇಶಕಾಣ" ಎಂಬ ನಾಣ್ಣುಡಿಯಂತೆ ಆಗ್ಗೆ ಅವನಿಗೆ ಎಂತಹ ಕಾರ್ಯವೂ ಅಸಾಧ್ಯವಾಗಿರಲಿಲ್ಲವು. ಈ ನಾಣ್ಣುಡಿಯಿಂದಲೂ, ಆಗಿನ ಅವನ ನಡೆವಳಿಕೆಗಳಿಂದಲೂ ಪ್ರಾಯದವರಿಗೆ ಮುಂದಿನ ಪರಿಣಾಮದ ಕಷ್ಟಸುಖಂಗಳ ಆಲೋಚನೆ ಇರುವುದಿಲ್ಲವೆಂಬುದನ್ನು ನಿರ್ಧರಿಸಬೇ ಕಾಗುವುದು. ಅವನ ಬಳಿಯಲ್ಲಿದ್ದ ಮೂವರು ಸೇವಕರಲ್ಲಿ ಇಬ್ಬರು ಆವು ದೋ ಕಾರಣದಿಂದ ಅಧಿಕಾರಿಯ ಆಜ್ಞೆಯನ್ನು ಪಡೆದು ಎಲ್ಲಿಗೋ ಹೊರಟುಹೋಗಿದ್ದರು. ಒಬ್ಬ ಸೇವಕನು ಮಾತ್ರ ಒಂದು ಮೂಲೆ ಯಲ್ಲಿ ಮಲಗಿದ್ದನು. ಅಧಿಕಾರಿಯೂ ಒಂದು ಕಡೆ ಮಲಗಿದ್ದನು. ಇಷ್ಟಾಗುವ ಹೊತ್ತಿಗೆ ಹನ್ನೆರಡು ಗಳಿಗೆ ಹೊತ್ತಾಯಿತು. ಆದರೆ ಅಧಿ ಕಾರಿಯಾದ ಮಧುದಾಸಯ್ಯನಿಗೆ ನಿದ್ರೆ ಹತ್ತಲಿಲ್ಲವು. ಆತನು ಕಣ್ಣು ಮುಚ್ಚಿದರೆ ತನ್ನ ಮುಂದೆಯೇ ಆಗ್ಗೆ ಸ್ವಲ್ಪ ಹೊತ್ತಿನ ಮೊದಲು ನೋ

ಡಿದ ಅತಿ ಸುಂದರಾಕೃತಿ ಚಿತ್ರಿಸಿದ್ದಂತೆ ತೋರುತ್ತಿದ್ದಿತು. ಒಂದೊಂದು ಸಾರಿ ಆ ವಿಗ್ರಹವು ತನ್ನ ಮೈಮೇಲೆ ಬಿದ್ದಂತೆ ಕಾಣಿಸುವುದು. ಒಂದು ವೇಳೆ ಭಯಂಕರವಾಗಿ ಅಂಜಿಸಿದಂತೆ ಕಾಣಿಸುವುದು. ಒಂದು ವೇಳೆ ಬುದ್ಧಿವಾದವನ್ನು ಹೇಳುವುದಕ್ಕೆ ಬಂದಂತೆ ಕಾಣುವುದು, ಒಂದು ವೇಳೆ ತನ್ನನ್ನು ಮುಟ್ಟುವಂತೆ ಕಾಣುವುದು, ಒಂದು ವೇಳೆ ಮುದ್ದಿಡುತ್ತಿರುವಂತೆ ಕಾಣುವುದು. ಹೀಗೆ ತನ್ನ ಮನದಲ್ಲಿ ಹೇಗೆ ಭಾವಿಸಿಕೊಳ್ಳುವನೋ ಹಾಗೆ ಹಾಗೆ ನಡೆಯಿಸಿದಂತೆ ತೋರುತ್ತಿದ್ದಿತು. ಅದೇನು ನಿಜವಾದ ನಡೆಯುವಿಕೆಯೇ ? ಸ್ವಪ್ನವೇ ? ಏನೂ ಅಲ್ಲ ! ತನ್ನ ಮನಸ್ಸು ವಿಕಲ್ಪವಾದಾಗ ತೋರುವ ಚಂಚಲ ಭಾವ ! ಆಗ ಆತನ ಮನಸ್ಸು ದೇಹದಲ್ಲಿರಲಿಲ್ಲವೆಂದು ಹೇಳುವುದೇ ? ಇದ್ದಿತಾದರೂ ಚಾಂಚಲ್ಯವನ್ನು ಹೊಂದಿದ್ದಿತು ! ಏತರಿಂದ ? ತನ್ನ ಮಂತ್ರಿಗಳ ಆಲೋಚನೆಗಳಿಂದ ! ಸುಮತಿ ಕುಮತಿಗಳೆಂಬುವೇ ಮನಸ್ಸಿನ ಮಂತ್ರಿಗಳು ! ಅವರಿಬ್ಬರ ಸಂವಾದವು ಈ ರೀತಿಯಾಗಿ ಹೃದಯಾಂತರ್ಗೃಹದಲ್ಲಿ ನಡೆಯುತ್ತಿದ್ದಿತು.

ಕುಮತಿ—ಆ ಸುಂದರಿಯನ್ನು ನೋಡಿದಾಗಳಿನಿಂದ ನನ್ನ ಇಂದ್ರಿಯಂಗಳು ನನ್ನ ವಶವಾಗದಿವೆ !

ಸುಮತಿ—ಛೀ ! ಪರನಾರಿಯನ್ನು ಕಂಡು ಹಾಗೆ ಯೋಚಿಸಬಾರದು.

ಕುಮತಿ—ನನ್ನ ಸಾಹಸವು ಇಂದ್ರಿಯಂಗಳಿಗಧೀನವಾಗಿದೆ. ಅವುಗಳ ಬಾಧೆಯನ್ನು ಸಹಿಸಲಾರೆನು.

ಸುಮತಿ—ಸ್ವಸ್ತ್ರೀಯನ್ನು ಹೊಂದುವವರೆಗೂ ತಡೆ ! ಆಮೇಲೆ ನಿನ್ನಿಷ್ಟದಂತೆ ಅನುವರ್ತಿಸಬಹುದು. ಪರಸ್ತ್ರೀಯನ್ನು ಕಂಡು ಹೀಗೆ ಮಾಡಬಹುದೇ ? ಇದು ಮಹಾ ಪಾಪವಲ್ಲವೇ?

ಕುಮತಿ—"ಪಾಪವೆಂಬುದು ಹೇಗಿರುವುದು ? ಆವ ರೂಪದಲ್ಲಿರುವುದು ? ಅದನ್ನು ಕಂಡವರಾರು ? ಸುಮ್ಮನೆ ಪಾಪ--ಪುಣ್ಯ ವೆಂದು ಜನ ರಾಡಿಕೊಳ್ಳುವರು ! ಆವಕಾಲಕ್ಕೆ ಏನು ಸಂಘಟಿಸುವುದೋ! ಅದನ್ನು ಅನುಭವಿಸಿಯೇ ತೀರಬೇಕೆಂದು ಹೇಳುವರಲ್ಲವೆ? ಈಗ ನಮ್ಮ ಕರಗತವಾಗಿರುವ ಸುಂದರಿಯನ್ನು ನೋಡಿದಾಗಳಿಂದ ಮನ್ಮಥನ ಬಾಧೆಯು ದುಸ್ಸಹವಾಗಿದೆ. ನಮ್ಮ ಅಧೀನದ

ಲ್ಲಿರುವ ಆ ಸುಂದರಿಯನ್ನು ಸೇರಬಾರದೇಕೆ ?" ಎಂದು ಪ್ರೇರಿಸಿ ಅವನನ್ನು ಮೇಲಕ್ಕೆಬ್ಬಿಸಿತು.

ಸುಮತಿ—"ಛೀ ! ಇದು ಸರಿಯಲ್ಲ! ನಮ್ಮನ್ನೇ ನಂಬಿ ನಮ್ಮ ಸಹೋದರಿಯಂತೆ ಭಾವಿಸಲ್ಪಟ್ಟು ಉಪಚರಿಸಲ್ಪಟ್ಟವಳಾಗಿ, ಸುಖವಾಗಿ ಮಲಗಿರುವ, ಪತಿವ್ರತೆಯನ್ನು ಕೆಣಕಿ, ಆಕೆಯ ಶಾಪಕ್ಕೂ ಲೋಕಾಪವಾದಕ್ಕೂ ಗುರಿಯಾಗುವೆಯಾ ? ಇದರಿಂದ ನಿನಗೆಷ್ಟು ಕಷ್ಟಂಗಳುಂಟಾಗುವುವೆಂಬುದನ್ನು ನೀನು ಈಗ ತಿಳಿಯಲಾರೆ. ಸುಮ್ಮನಿರು !" ಎಂದು ಆತನನ್ನು ಮತ್ತೆ ಮಲಗುವಂತೆ ಮಾಡಿತು.

ಕುಮತಿ—"ಏನು ? ನಿನಗೆ ಧೈರ್ಯಸಾಲದೆ ? ಅಬಲೆಯೊಬ್ಬಳಿರುವಳು ! ನೀವಿಬ್ಬರಿರುವಿರಿ ! ನಿನ್ನ ಆಜ್ಞೆಯನ್ನು ಸೇವಕನು ಮೀರಲಾರನು ! ಅವಳು ನಯದಿಂದ ಒಪ್ಪದಿದ್ದರೆ ಬಲಾತ್ಕಾರದಿಂದಲಾದರೂ ವಶಪಡಿಸಿಕೊಳ್ಳುವ ಶಕ್ತಿ ನಿನಗಿದ್ದೂ ಹೇಡಿಯಾಗಬಹುದೇ ?" ಎಂದು ಹೀಯಾಳಿಸಿತು. ಆಗ ಅಧಿಕಾರಿಯಾದ ಮಧುದಾಸಯ್ಯನು ಕುಮತಿಯ ತಿರಸ್ಕೃತಿಗೆ ಕೋಪಗೊಂಡು, ತನ್ನ ಸಾಹಸವನ್ನು ತೋರಿಸದಿರಬಾರದೆಂದೋ, ಇಂದ್ರಿಯಂಗಳ ಉದ್ರೇಕದಿಂದಲೋ ? ಸ್ವಭಾವವಾದ ಪ್ರಾಯದ ಅಹಂಕಾರದಿಂದಲೊ, ಮುಂದಿನ ಕಾರ್ಯಕ್ಕೆ ಒಪ್ಪಿ ಮೇಲಕ್ಕೆದ್ದು ಆ ಸುಂದರಿಯಿದ್ದ ಮನೆಗೆ ಬಂದನು.

ದುರುಳ ಹರೆಯವೆ! ನಿನ್ನ ಮಹಿಮೆಯನ್ನು ಏನೆಂದು ಹೊಗಳಲಿ ! ನೀನು ನೀಚರ ಸಹವಾಸಕ್ಕೆ ಸೇರುವಷ್ಟು ಬೇಗ ಸುಜನರ ಸಹವಾಸವನ್ನು ಮಾಡುವುದಿಲ್ಲ ! ನಿನ್ನಿಂದ ಅಣುಮಾತ್ರಕಾರ್ಯವೂ ನಡೆಯಲಾರದಾದರೂ ಮೂರು ಲೋಕವನ್ನೂ ಗೆಲ್ಲಬಲ್ಲೆನೆಂದು ಅಹಂಕರಿಸುತ್ತಿರುವೆ! ನೀನು ಆರ ಉಪಕಾರಕ್ಕೋಸ್ಕರ ಭಗವಂತನಿಂದ ಈ ಪ್ರಪಂಚಕ್ಕೆ ಕಳುಹಲ್ಪಟ್ಟೆಯೋ ಆ ಪ್ರಾಣಿಗೆ ಅಪಕಾರವನ್ನೇ ಮಾಡಿ ಭಗವಂತನ ಆಗ್ರಹಕ್ಕೆ ಪಾತ್ರವಾಗುವೆ! ಇದು ಒಳ್ಳೆಯದು ಇದು ಕೆಟ್ಟುದು ಎಂಬುದನ್ನು ಚೆನ್ನಾಗಿ ನಿರ್ಧರಿಸುವಷ್ಟು ಶಕ್ತಿಯೂ, ಧೈರ್ಯಲಕ್ಷ್ಮಿಯ ಸಹಾಯವೂ ನಿನಗಲ್ಲದೆ ನಿನ್ನ ಸಹೋದರರಾದ, ಬಾಲ್ಯ

ಕೌಮಾರ, ವಾರ್ಧಿಕ್ಯಂಗಳಿಗಿಲ್ಲವು. ಹಾಗಾದರೂ ನೀನು ಕೆಟ್ಟ ದಾರಿಗೆ ಹೋಗುವಷ್ಟು ಬೇಗ ಒಳ್ಳೆಯ ದಾರಿಗೆ ಹೋಗಲಾರೆ ! ನಿನಗೆಷ್ಟು ಬುದ್ಧಿ ಇದೆಯೋ ಅಷ್ಟು ಅಜ್ಞಾನವೂ ಇದೆ. ಅಜ್ಞಾನವನ್ನು ಕಳೆದು ಕೊಳ್ಳುವಶಕ್ತಿ ನಿನಗಿದ್ದಷ್ಟು ಮತ್ತಾರಿಗಿದೆ ? ಅದನ್ನು ನೀನು ಮಾಡದೆ ನೀನೂ ಕೆಟ್ಟು ನಿನ್ನನ್ನು ನಂಬಿದವರನ್ನೂ ಹಾಳುಮಾಡುವೆ ! ಇದ ಕ್ಕಾಗಿ ನಿನ್ನನ್ನು ನಿಂದಿಸುವುದೋ ? ನಿನ್ನ ಸ್ನೇಹಿತನನ್ನು ನಿಂದಿ ಸುವುದೋ ? ನಿನ್ನೊಡೆಯನನ್ನು ನಿಂದಿಸುವುದೋ ? ಎಲ್ಲರಿಗಿಂ ತಲೂ ಮೊದಲು ನಿನ್ನನ್ನೇ ನಿಂದಿಸುತ್ತೇನೆ. ಏಕೆಂದರೆ, ಭಗ ವಂತನ ಆಜ್ಞೆಯನ್ನು ಅತಿಕ್ರಮಿಸಿ, ಕರ್ತವ್ಯಕಾರ್ಯವನ್ನು ಮಾಡದೆ ಬೇರೆ ಕೆಲಸವನ್ನು ಮಾಡುವುದಕ್ಕೆ ಹೋಗುವೆ ! ನಿನ್ನನ್ನು ಸುಲ ಭವಾಗಿ ಹಳ್ಳಕ್ಕೆ ತಳ್ಳುವ ಕುಮತಿಯ ಸಂಗವನ್ನು ದೂರಮಾಡಿ, ಸುಮತಿಯ ಸ್ನೇಹವನ್ನು ಸಂಪಾದಿಸಿ ನಿನ್ನ ಸುಖಕ್ಕೆ ವೈರಿಗಳಾದ ಅರಿಷಡ್ವರ್ಗಂಗಳನ್ನು ಎಂದು ಗೆಲ್ಲುವೆಯೋ ಅಂದು ನೀನೂ ಸುಖ ವನ್ನು ಹೊಂದಿ, ಲೋಕರ ಸನ್ನುತಿಗೆ ಪಾತ್ರವಾಗುವೆ ! ಆ ಪುಣ್ಯವು ಪೂರ್ವಫಲವೆಂಬುವೆಯಾ ? ಅಲ್ಲ ! ಈಗ ನಿನ್ನ ಕೈಯಲ್ಲಿದೆ ! ನಿನ್ನ ಕರ್ತವ್ಯದಿಂದಲೇ ಸುಖ ಕಷ್ಟಂಗಳು ಲಭಿಸುವುವು ! ಮನು ಷ್ಯರ ಇಂದ್ರಿಯಂಗಳೇ ಅವರನ್ನು ಕೆಟ್ಟ ದಾರಿಗೆ ಎಳೆಯುವುವು. ನಾನೇನು ಮಾಡುವೆನು ? ಎಂದು ತಲೆ ತಪ್ಪಿಸಿಕೊಳ್ಳುವೆಯೋ ? ಆ ಜಾಣ್ಮೆಯು ನಿನ್ನಲ್ಲಿ ಚೆನ್ನಾಗಿದೆ ! ಹಾಗಾದರೆ ಮಧುದಾಸಯ್ಯನನ್ನು ದುಷ್ಪಥಕ್ಕೆ ಎಳೆಯುವಂತೆ ಕುಮತಿಗೆ ಪ್ರೇರಿಸಿ, ಅದಕ್ಕೆ ಬೇಕಾದ ಸಹಾಯವನ್ನು ಮಾಡಿ, ಅವನಿಗೆ ಕೇಡನ್ನುಂಟುಮಾಡಿದವರಾರು ? ನೀನೇ ! ಹೇಗೇ ಇರಲಿ, ಮಧುದಾಸಯ್ಯನೇನೋ ಕುಮತಿಯ ಬೋ ಧನೆಯಂತೆಯೇ ಮಾಡಿದನು.

ಮಧುದಾಸ—ಬಾಗಿಲು ತೆರೆಯಿರಿ ! ಎಂದು ಕೂಗಿದನು.

ಸುಂದರಿ—ಆರು ?

ಮಧುದಾಸ—ನಾನು !

ಸುಂದರಿ—ಆರು ? ಅಧಿಕಾರಿಗಳೇ ? ಏನಣ್ಣ ? (ಎಂದು ಒಳಗಿನಿಂದಲೇ ಮಾತನಾಡಿಸಿದಳು.)

ಮಧುದಾಸ—ಸ್ವಲ್ಪ ಕೆಲಸವಿದೆ! ಬಾಗಿಲು ತೆಗೆಯಿರಿ!

ಸುಂದರಮ್ಮನಿಗೆ ಏನೋ ಒಂದು ವಿಧವಾದ ಭಯವೂ ಮೈ ನಡುಕವೂ ಉಂಟಾದುವು. ನೆಲಕ್ಕೆ ಕುಸಿದುಬಿದ್ದಳು.

ಮಧುದಾಸ—ಬಾಗಿಲು ತೆಗೆಯಿರಿ! ಆಮೇಲೆ ಹೇಳುತ್ತೇನೆ!

ಈ ಮಾತು ವಿಜಯಸೇನನಿಗೆ ಚೆನ್ನಾಗಿ ಕೇಳಿಸಿತು. ಏಕೆಂದರೆ, ಆತನು ತನ್ನ ಓಲೆಯ ಮೂರನೆಯ ವಾಕ್ಯವನ್ನು ಮನದಲ್ಲಿಟ್ಟಿದ್ದನು. ಅದಕ್ಕಾಗಿ ಆತನಿಗೆ ನಿದ್ರೆ ಬರಲಿಲ್ಲ. ಕೂಡಲೆ ಸಂಗತಿಯೇನೋ ತಿಳಿಯೋಣವೆಂದು, ಸಮೀಪಕ್ಕೆ ಬಂದು, ಮರೆಯಲ್ಲಿ ಈ ಮಾತುಗಳನ್ನು ಕೇಳುತಿದ್ದನು.

ಕಡೆಗೆ ಬಾಗಿಲನ್ನು ನೂಕುವಿಕೆಯೂ ನಿಷ್ಠುರವಾದ ದುರ್ಭಾಷೆಗಳೂ ಅಧಿಕವಾಗಲು, ಸುಂದರಮ್ಮನು ಆದುದಾಗಲೆಂದು, ಪ್ರಾಣದ ಮೇಲಿನ ಆಶೆಯನ್ನು ತೊರೆದು, ಬಾಗಿಲದ್ನು ತೆರೆದಳು.

ಮಧುದಾಸ—(ಒಳಗೆ ಬಂದು) ಸುಂದರಿ! ಭಯಪಡಬೇಡ! ನಿನ್ನನ್ನು ಕಾಪಾಡುವುದಕ್ಕೆ ನಾನಿಲ್ಲವೆ? ಸ್ವಸ್ಥಚಿತ್ತಳಾಗು (ಎಂದು ಸಮೀಪಕ್ಕೆ ಹೋದನು.)

ಸುಂದರಮ್ಮ—(ಮೇಲಕ್ಕೆದ್ದು) ಅಣ್ಣಾ! ನಿಮ್ಮಿಂದಲೇ ಇದುವರೆಗೆ ಸ್ವಸ್ಥಳಾಗಿದ್ದೆನು. ದಯೆಯಿಟ್ಟು ತಾವು ಹೊರಟುಹೋದರೆ ನಿಜವಾಗಿ ಸ್ವಸ್ಥಳಾಗಿರುವೆನು.

ಮಧುದಾಸ—ಇನ್ನು ಅಣ್ಣಾ! ಎಂಬ ಮಾತನ್ನು ಬಿಡು! ನನ್ನಲ್ಲಿ ಪ್ರೀತಿ ಇಡು! ನಿನ್ನ ಸೇವಕನಾಗಿರುವೆನು.

ಸುಂದರಮ್ಮ—"ಹರಿ ಹರಿ!" ಎಂದು ಕಿವಿಗಳನ್ನು ಕೈಗಳಿಂದ ಮುಚ್ಚಿಕೊಂಡು, "ಎಂತಹ ಮಾತನ್ನು ಕೇಳಿದೆನು. ಛೀ! ನೀಚ ಪ್ರಾಣವೆ! ಇನ್ನೂ ಬದುಕಿರುವೆಯಾ? ಆ ದಡದಡನೆ ಗುಡುಗುತ್ತಿದ್ದ ಧೂಮಶಕಟದ ಕೆಳಗೆ ಬಿದ್ದು ಗತಪ್ರಾಣಿಯಾಗಿದ್ದರೆ ಇಂತಹ ಸಂಕಟಕ್ಕೆ ಗುರಿಯಾಗುತ್ತಿರಲಿಲ್ಲ. ಅಯ್ಯೋ! ದುರ್ವಿಧಿಯೇ! (ಎಂದು ಗೋಳಾಡುವಳು.)

ಮಧುದಾಸ—ಸುಂದರೀಮಣಿ! ಏಕೆ ಯೋಚಿಸುವೆ? ಪ್ರೀತಿಸು! ಇನ್ನು ಹೇಗೂ ನನ್ನಿಂದ ಬಿಡುಗಡೆಯನ್ನು ಹೊಂದಲಾರೆ! ಬಲಾ

ತ್ಕಾರದಿಂದ ವಶಳಾಗುವುದಕ್ಕಿಂತಲೂ ಈಗಲೇ ಪ್ರೀತಿಸಿ ಆನಂದವನ್ನೊಂದಿಸು ! ನಿನಗೂ ಸುಖವೇ ಸಿದ್ಧವಾಗಿರುವುದು ! ನನ್ನ ಅಪಾರವಾದ ಐಶ್ವರ್ಯವು ನಿನ್ನ ವಶವಾಗುವುದು !

ಸುಂದರಮ್ಮ—ಛೀ ! ನೀಚನೆ ! ಘಾತುಕನೆ ? ನನ್ನ ಪ್ರಾಣವು ಈಗಲೇ ಹೋದರೂ ನಾನು ಕೆಟ್ಟಯೋಚನೆಯನ್ನು ಮಾಡುವವಳಲ್ಲವು. ನಿನ್ನ ದುರ್ಮತಿಗಾಗಿ ನೀನು ನಾಶವಾಗುವುದೇ ನಿಜವು !

ಮಧುದಾಸ—ಛೀ ! ನೀಚಳೇ ! ಅವಿವೇಕಿಯೇ ! (ಎಂದು ಬಲಾತ್ಕಾರದಿಂದ ಆಕೆಯ ಕೈಹಿಡಿದೆಳೆಯುವನು.)

ಸುಂದರಮ್ಮ—(ಮನಸ್ಸಿನಲ್ಲಿ) ಈ ನೀಚನಿಗೆ ಪ್ರತಿಯಾಡುತ್ತಾ ಸಾವಕಾಶಮಾಡಿದರೆ ಅಬಲೆಯಾದ ನನಗೆ ವಿಪತ್ಪರಂಪರೆಗಳೊದಗುವುವು. ನನ್ನ ಪಾತಿವ್ರತ್ಯವು ಕೆಡದಿರುವುದಕ್ಕೆ ಏನುಪಾಯವೂ ತೋರದು. ತೋರಿದರೂ ನಾನೊಬ್ಬಳು ! ಅಬಲೆ ! ಆಗಲಿ ! ಎಂದು ಆತನನ್ನು ಕುರಿತು, " ಪೂಜ್ಯನೇ ! ಮಹಿಳೆಯರು ಹೇಗೂ ಸಬಲರಾದ ಪುರುಷರ ಅಧೀನರು. ಸಧ್ಯಕ್ಕೆ ನಾನು ನಿರಾಶ್ರಯಳಾಗಿ ನಿನ್ನ ಅಧೀನದಲ್ಲಿರುವೆನು. ನಿನ್ನ ಇಷ್ಟಕ್ಕೆ ಪ್ರತಿಯಾಡಿದರೂ ನನ್ನ ಶಕ್ತಿ ಏನು ಸಾಗುವುದು ? ಆದುದರಿಂದ ಇನ್ನು ನನ್ನನ್ನು ಹಿಂಸಿಸಬೇಡ ! ಒಂದು ಕ್ಷಣ ಸಾವಕಾಶ ಮಾಡಿದರೆ, ನಾನು ಹೊರಗೆ ಹೋಗಿ ಬರುವೆನು. " ಎಂದಳು.

ಮಧುದಾಸ—(ಸಂತೋಷದಿಂದ) ಈಗ ನಾನು ಧನ್ಯನು ! ನೀನು ಸಂತೋಷಾನ್ವಿತಳು ! ನಿನ್ನ ಇಷ್ಟದಂತೆ ಆಗಬಹುದು.

ಸುಂದರಮ್ಮ—(ಸಂತೋಷದಿಂದ ಹೊರಗೆ ಬಂದು ಸಮೀಪದಲ್ಲಿದ್ದ ಒಂದು ದೊಡ್ಡ ವೃಕ್ಷವನ್ನೇರಿ ಮೇಲೆ ಹೋಗಿ ಕುಳಿತುಕೊಂಡಳು.)

ಮಧುದಾಸ—(ಸ್ವಲ್ಪಹೊತ್ತು ಸುಮ್ಮನಿದ್ದು) ಇದೇನು ? ಎರಡುಗಳಿಗೆ ಹೊತ್ತಾದರೂ ಸುಂದರಿಯೇಕೆ ಬಾರಲಿಲ್ಲ ? (ಎಂದು ಹೊರಗೆ ಬಂದು) ಎಲೌ ಪ್ರಿಯೆ ! ಸುಂದರೀ ! ಎಲ್ಲಿರುವೆ ? ಏಕೆ ಇಷ್ಟು ಹೊತ್ತು ತಡೆಯಾಯಿತು ? ಬೇಗಬಾ ! (ಎಂದು ಕೂಗಿದನು.)

(ಸುಂದರಮ್ಮನು ಮಾತನಾಡದಿರಲು ಸೇವಕನೊಡನೆ) ಎಲೈ! ಆ ನೀಚಳು ಎಲ್ಲಿ ಹೊರಟಳೋ? ಕತ್ತಲಿನಲ್ಲಿ ಒಬ್ಬಳೇ ಹೇಗೆ ಹೋದಾಳು? ಮಗು ಕೂಡಾ ಇಲ್ಲಿಯೇ ಇದೆ! ದೀಪವನ್ನು ಹಿಡಿದು ನೋಡು! ಏಕೆ ತಡೆ ಮಾಡುವಳು? ಬೇಗ ಬಾರೆಂದು ಕೂಗು!

ಸೇವಕ—ಅಪ್ಪಣೆ (ಎಂದು ಹಾಗೆಯೇ ಕೂಗಿ) ಮಹಾಸ್ವಾಮಿ! ಎಲ್ಲಿಯೂ ಕಾಣುವುದಿಲ್ಲವು.

ಮಧುದಾಸ—ಬಹು ಅನರ್ಥವಾಯಿತಲ್ಲಾ? ಆ ನೀಚಳು ತಪ್ಪಿಸಿಕೊಂಡು ಹೋಗಿ, ನಮ್ಮ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಏನು ಮಾಡುವುದು? ಹೇಗಾದರೂ ಏನಾದರೂ ಉಪಾಯ ಮಾಡಿ ಅವಳನ್ನು ಇಲ್ಲಿಗೆ ಬರಮಾಡಿಕೊಂಡು, ಇಂದಿಗೆ ಅವಳ ಗತಿ ಕಡೆಗಾಣಿಸಬೇಕು! ಇನ್ನು ಅವಳು ಇಲ್ಲಿಗೆ ಬರುವುದಕ್ಕೆ ಏನು ಮಾಡಬೇಕು? ಆಗಲಿ! ಸೇವಕನೆ! ಹೀಗೆಂದು ಕೂಗಡು!

ಸೇವಕ—ಹೇಗೆಂದು?

ಮಧುದಾಸ—"ಬೇಗ ಬಾ! ಬಾರದಿದ್ದರೆ ನಿನ್ನ ಮಗುವು ಮೃತ್ಯುವಿನ ಬಾಯಿಗೆ ತುತ್ತಾಗುವುದು!" ಎಂದು. (ಸೇವಕನೂ ಹಾಗೆಯೇ ಕೂಗಿದನು.) ಮರದಮೇಲಿದ್ದ ಸುಂದರಮ್ಮನು "ಛೀ! ನೀಚನೆ! ಏನಾದರೂ ಮಾಡಿಕೋ! ನನ್ನ ಪಾತಿವ್ರತ್ಯವೇ ನನಗೆ ಹೆಚ್ಚಾದುದು. ನಿನ್ನ ಕರ್ಮದಿಂದ ನೀನೇ ಪಾಪಕೂಪನಿಮಗ್ನನಾಗುವೆ!" ಎನ್ನಲು ಮರೆಯಲ್ಲಿದ್ದ ವಿಜಯಸೇನನು "ಭಳಿರೆ! ಸಾಧ್ವಿ! ನೀನೆ ಸತ್ಕುಲಪ್ರಸೂತೆ! ಸರ್ವಮಂಗಳೆ!" ಎನ್ನುತ್ತಿದ್ದನು.

ಮಧುದಾಸ—ಹ! ಈ ಮರದ ಮೇಲೆಯೇ ಮಾತನಾಡುವಂತಿದೆ! ಸೇವಕನೆ! ಮರವನ್ನೇರಿ ಹಿಡಿದುಕೊಂಡು ಬಾ! ಕೈಗೆ ಸಿಕ್ಕಿದಳು.

ಸುಂದರಮ್ಮ—ಮರವನ್ನೇರಿದರೆ ತಲೆಯೊಡೆಯುವುದು! ನನ್ನ ಕೈಯಲ್ಲಿರುವ ದೊಣ್ಣೆಯು ನಿಮಗೆ ಕಾಣಿಸುವುದಿಲ್ಲವಲ್ಲವೆ? ನಿಮಗೆ ಪ್ರಾಣದ ಮೇಲೆ ಆಶೆ ಇದ್ದರೆ ಮರದ ಬಳಿಗೆ ಬರಲಾರಿರಿ!

ಸೇವಕ—ಒಡೆಯನೆ! ಕತ್ತಲೆ ವೇಳೆ, ಮರವನ್ನು ಹತ್ತಬಾರದು. ಏನಾದರೂ ಉಪಾಯದಿಂದ ಅವಳನ್ನೇ ಇಲ್ಲಿಗೆ ಬರಮಾಡಿಕೊಳ್ಳಬೇಕು.

ಮಧುದಾಸ—ಎಲೆ! ಹೆಣ್ಣೆ! ನೀನು ಬಾರದೆ ಇದ್ದರೆ ನಿನ್ನ ಮಗುವನ್ನು ಕಳೆದುಕೊಳ್ಳುವೆ!

ಸುಂದರಮ್ಮ—ನಾನು ಬರುವುದಿಲ್ಲವು.

ಮಧುದಾಸ—ಇದೋ! ನಿನ್ನ ಮಗುವು! ಎಲೈ ಸೇವಕನೆ! ದೀಪವನ್ನಿಲ್ಲಿಡು! ನಮ್ಮ ಮನೆಗೆ ಹೋಗಿ ಬಂದು ಸಣ್ಣ ಕತ್ತಿಯನ್ನು ತೆಗೆದುಕೊಂಡು ಬಾ! ಎನ್ನಲು,

ಸೇವಕ—ಅಪ್ಪಣೆ (ಎಂದು ಹೊರಟುಹೋದನು.)

ವಿಜಯಸೇನನು ಇನ್ನು ತಡಮಾಡಬಾರದು ; ಈ ನೀಚನು ಹಸುಳೆಯ ಹರಣವನ್ನು ನೀಗುವುದಕ್ಕೆ ಹೇಸುವನಲ್ಲವು. ಕೈ ಮಿಂಚಿದ ಮೇಲೆ ಮಾಡುವುದೇನು ? ಮೊದಲೇ ಇವನಿಗೆ ತಕ್ಕ ಶಿಕ್ಷೆಯನ್ನು ಮಾಡಿ, ಮಗುವನ್ನು ಬಿಡಿಸಬೇಕು. ಎಂದು ಸಮೀಪದಲ್ಲಿದ್ದ ಬಂದು ಕಾಡುಕಟ್ಟಿಗೆಯನ್ನು ತೆಗೆದುಕೊಂಡು ಬೇಗ ಓಡಿ ಬಂದು ಮಧುದಾಸನ ಬೆನ್ನಿನಮೇಲೆ ಎರಡೇಟನ್ನು ಕೊಟ್ಟು, ಅವನ ಜುಟ್ಟನ್ನು ಹಿಡಿದುಕೊಂಡು ಮಗುವನ್ನು ಅವನಿಂದ ಬಿಡಿಸಿ, ಅವನ ಮೈಮುರಿಯುವಂತೆ ಚೆನ್ನಾಗಿ ಒದೆಗಳನ್ನು ಕೊಟ್ಟು, ಉಸುರಾಡದಂತೆ ಮಾಡಿ, ಅದೇ ಚಿಕ್ಕ ಮನೆಯೊಳಕ್ಕೆ ಅವನನ್ನು ನೂಕಿ, ಬೀಗವನ್ನು ತಗಲಿಸಿ, ಸೇವಕನಿರುವೆಡೆಗೆ ಗದ್ದಲವಿಲ್ಲದೆ ಹೋಗಿ, ಅವನ ಜುಟ್ಟನ್ನು ಹಿಡಿದುಕೊಂಡು ಕಾಡುಕಟ್ಟಿಗೆ ಮುರಿಯುವಂತೆ ಅವನನ್ನು ಹೊಡೆದು ಮೇಲಕ್ಕೇಳದಂತೆ ಮಾಡಿ, ಅವನನ್ನೊಂದು ಕಿರುಮನೆಗೆ ತಳ್ಳಿ ಬೀಗವನ್ನು ಹಾಕಿ, ಮುಂದಿನ ಜಿಲ್ಲಾದ ಅಧಿಕಾರಿಗೆ ಈ ವಾರ್ತೆಯನ್ನು ತಂತಿಯ ಮೂಲಕ ತಿಳುಹಿಸಿ, ಸುಂದರಮ್ಮನಿದ್ದೆಡೆಗೆ ಬಂದು, ನನ್ನ ಪ್ರಿಯ ಸಹೋದರಿ! ಅಳುತ್ತಿರುವ ನಿನ್ನ ಮಗುವನ್ನು ಸಮಾಧಾನವನ್ನೊಂದಿಸು! ತಾಯಿ! ನಿನ್ನ ಪಾತಿವ್ರತ್ಯಮಾಹಾತ್ಮ್ಯವು ಅತ್ಯತಿಶಯವಾದುದು. ಇಂತಹ ನಿರ್ಜನಾರಣ್ಯದಲ್ಲಿ ದುರ್ಜನರ ಕೈಗೆ ಸಿಕ್ಕಿದ ನೀನು, ನಿನ್ನ ಮಗುವಿನಲ್ಲಿಯೂ ಮಮತೆಯನ್ನಿಡದೆ,ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವುದಕ್ಕೆ, ಅನ್ಯರು ಅರಿಯಲು ಅಸಾಧ್ಯವಾದ ಉಪಾಯವನ್ನೂಹಿಸಿ, ಸಾಹಸಪಟ್ಟು, ಜಗಕ್ಕೆ ಸನ್ಮಾರ್ಗದಾಯಿನಿಯಾದ, ನಿನಗೆ ನಾನೇ ಅಲ್ಲದೆ,

ಪ್ರಪಂಚವೆಲ್ಲವೂ ಕೃತಜ್ಞತೆಯನ್ನು ತೋರಿಸಿದರೂ, ಕೊಂಚವೇ ಆಗಿರುವುದು ! ಸುಗುಣಿನಿ ! ನಿನ್ನ ಮಗುವನ್ನು ಸಂತೈಸಿಕೊ ! ನನ್ನನ್ನು ನಿನ್ನ ಸಹೋದರನೆಂದು ಭಾವಿಸು ! ನಿನ್ನಂತಹ ಪತಿವ್ರತೆಗೆ ಕೇಡೆಳಸುವವರಿಗೆ ಆಗುವ ಗತಿ, ಈಗ ನಿದರ್ಶನವಾಯಿತಲ್ಲವೆ ? ಇನ್ನುಮೇಲೆಯೂ ಇದೇ ಸನ್ಮಾರ್ಗವನ್ನೇ ಅನುಸರಿಸಿ ಸರ್ವಮಂಗಳೆಯೆನಿಸಿ, ಮಂಗಳದೇವತೆಯ ಕರುಣಾಕಟಾಕ್ಷವೀಕ್ಷಣೆಗೆ ಲಕ್ಷ್ಯಳಾಗು ! ನಿನ್ನ ಸದ್ಗುಣವು ಸರ್ವಶ್ಲಾಘ್ಯವಾದುದು ! ನಾನು ಮನುಷ್ಯಮಾತ್ರದವನಾಗಿ, ಇರುವುದರಿಂದ ನಿನ್ನನ್ನು ಸ್ತೋತ್ರಮಾಡಲು ಶಕ್ತನಾಗಿಲ್ಲವೆಂದು ವ್ಯಸನಪಡಬೇಕಾಗಿದೆ ! ಇನ್ನು ನಿನ್ನ ಮನದ ಭಯವನ್ನು ಬಿಡು ! ನಾನು ವಿಜಯಸೇನನೆಂದು ತಿಳಿ ! ಎನ್ನುತ್ತಿರಲು ಸುಂದರಮ್ಮನು ಸ್ವಲ್ಪ ಭಯವಿಮುಕ್ತೆಯಾದರೂ ಸ್ತ್ರೀಯರ ಸ್ವಾಭಾವಿಕವಾದ ಮನಸ್ಸಿನ ಭಯದಿಂದ ಕೆಳಗಿಳಿಯಲಂಜಿ ಇಳಿಯುವದಕ್ಕೆ ತಡೆಮಾಡಲು ವಿಜಯಸೇನನು, ತಾಯಿ ! ನೀನು ಭಯವನ್ನು ಬಿಡು ! ಮಗುವು ಗೋಳಾಡುತ್ತಿರುವುದನ್ನು ನೋಡಿ ಹೇಗೆ ಸಹಿಸಿರಲಿ ? ನನ್ನನ್ನು ನಿನ್ನ ಒಡಹುಟ್ಟಿದವನಂತೆ ಭಾವಿಸು ! ಮಾಗಧ ದೇಶಾಧೀಶನಾದ ಧರ್ಮಧ್ವಜನ ತನುಜನಾದ ವಿಜಯಸೇನನು ಮತ್ತೆ ನಿನ್ನನ್ನು ಕಷ್ಟಕ್ಕೆ ಗುರಿಮಾಡುವನೆ ? ನಿರ್ಭಯವಾಗಿರು ! ಎಂದು ಹೇಳುತ್ತಿರಲು ಸುಂದರಮ್ಮನು ಭಯವಿಮುಕ್ತಳಾಗಿ ಮರದಿಂದಿಳಿದು, ವಿಜಯಸೇನನಿಗೆ ಕೃತಜ್ಞತೆಯಿಂದ ಕೈಮುಗಿದು, ತನ್ನ ಮಗುವನ್ನು ಸಂತೈಸಿ, ಆತನ ವರ್ತಮಾನವನ್ನೆಲ್ಲಾ ವಿಚಾರಿಸಿ ತಿಳಿದುಕೊಂಡು, ತನ್ನ ವಿಷಯವನ್ನು ಆತನಿಗೆ ಅರಿಕೆಮಾಡಿ, ಆತನ ಅಪ್ಪಣೆಯಂತೆ ಅಲ್ಲಿದ್ದ ಒಂದು ಸಣ್ಣ ಮನೆಯಲ್ಲಿ ತನ್ನ ಮಗುವಿನೊಂದಿಗೆ ಸುಖವಾಗಿ ನಿದ್ರೆಮಾಡಿದಳು. ವಿಜಯಸೇನನು ಆಕೆಯ ಸೇವಕನಂತೆ ಆ ಮನೆಯ ಬಾಗಿಲಿನಲ್ಲಿ ಬೆಳಗಾಗುವವರೆಗೂ ಕಾದಿದ್ದು, ಬೆಳಗ್ಗೆ ಬಂದ ಅವಳ ಬಂಧುಗಳಿಗೆ ರಾತ್ರಿಯ ವೃತ್ತಾಂತವನ್ನು ಹೇಳಿ, ಅವಳ ಸಚ್ಚರಿತ್ರೆಯನ್ನು ಶ್ಲಾಘಿಸಿ, ದುಷ್ಟನಾದ ಮಧುದಾಸಯ್ಯನನ್ನು ರಾಜಭಟರ ವಶಕ್ಕೊಪ್ಪಿಸಿ, ಒಡೆಯನ ಆಜ್ಞೆಯಂತೆ ನಡೆದ ಸೇವಕನಿಗೆ ನೀತಿಯನ್ನು ಹೇಳಿ, ಅವನನ್ನು ರಾಜದಂಡನೆಯಿಂದ ಬಿಡಿಸಿ, ಕಳುಹಿಸಿ, ಓಲೆಯ ಮೂರನೆಯ ವಚನವನ್ನನುಸರಿಸಿದುದರ ಪರಿಣಾಮವನ್ನು

ತನ್ನ ಮನದಲ್ಲಿ ತಾನೇ ನೆನೆಯುತ್ತಾ, ಮುಂದಿನ ಮಾರ್ಗವನ್ನು ಹಿಡಿದು ಹೊರಟುಹೋದನು.

ವಿಜಯಸೇನನು ಹೋಗುತ್ತಾ ಇರಲಾಗಿ ಮಾರ್ಗದಲ್ಲಿ ಮಂಡನಪುರಿ ಎಂಬೊಂದು ನಗರವು ಕಾಣಿಸಿತು. ಬಹುಕಾಲ ಅರಣ್ಯಮಾರ್ಗ ಸಂಚಾರಿಯಾಗಿ ಅತಿಶ್ರಮಪಾಂತಿದ್ದ ತಾನು ಕೆಲವು ದಿನಗಳೀಪಟ್ಟಣದಲ್ಲಿ ಕಾಲವನ್ನು ಕಳೆದು ಮುಂದಕ್ಕೆ ಹೋಗೋಣ, ಎಂದು ಆ ಪಟ್ಟಣಕ್ಕೆ ಬಂದು ಒಂದು ಸಣ್ಣ ಮನೆಯನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು ಅಲ್ಲಿ ವಾಸವಾಗಿದ್ದನು. ತಾನು ಅಲ್ಲಿಗೆ ಹೊಸಬನಾದುದರಿಂದ ಸ್ಥಳೀಯರಾರಪರಿಚಯವೂ ಇಲ್ಲದುದಕ್ಕಾಗಿ ತಾನೇ ಕಂಡಕಂಡವರನ್ನೆಲ್ಲಾ ಮನೆಯೊಳಗೆ ಕರೆಯುವುದೂ, ಮನ್ನಣೆಯನ್ನು ಮಾಡುವುದೂ, ಹಿತವಾದ ಮಾತುಗಳನ್ನಾಡುವುದೂ, ಅವರಿಗೆ ಬೇಕಾದ ಉಪಕಾರವನ್ನು ಮಾಡುವುದೂ, ಹೀಗೆ ಅಲ್ಲಿನವರ ಸ್ನೇಹವನ್ನು ಬೆಳೆಯಿಸುವ ಪ್ರಯತ್ನ ಮಾಡುತ್ತಿದ್ದನು. ಅಲ್ಲಿನವರಲ್ಲಿ ಕೆಲವರು ಈತನ ಹಿತವಾದ ಮಾತುಗಳನ್ನು ಕೇಳುವುದಕ್ಕೆ ಬರುವರು, ಕೆಲವರು ಈತನಿಂದ ಏನಾದರೂ ಸಹಾಯವನ್ನಪೇಕ್ಷಿಸಿ ಬರುವರು, ಕೆಲವರು ಈತನ ಒಳ್ಳೆನಡೆಯನ್ನು ನೋಡಿ ಸ್ನೇಹವನ್ನು ಮಾಡಲೆಳಸಿ ಬರುವರು, ಕೆಲವರು ಏನಾದರೂ ಉಪಾಯಮಾಡಿ ಈತನ ಸರ್ವಸ್ವವನ್ನೂ ಅಪಹರಿಸಬೇಕೆಂದು ಬರುವರು, ಕೆಲವರು ತಾತ್ಕಾಲಿಕಸುಖವನ್ನು ಬಯಸಿಬರುವರು, ಕೆಲವರು ಉಪಕಾರವನ್ನು ಮಾಡಲೆಳಸಿ ಬರುವರು, "ಭಿನ್ನರುಚಿರ್ಹಿಲೋಕಃ" ಎಂಬಂತೆ ಒಬ್ಬೊಬ್ಬರ ಆಶಯವೊಂದೊಂದು ರೀತಿ! ಹೀಗೆ ಬರುತ್ತಿದ್ದವರಲ್ಲಿ ರಾಮಣ್ಣ ಭೀಮಣ್ಣ, ಎಂಬಿಬ್ಬರು ಮುಖ್ಯರಾಗಿದ್ದರು. ವಿಜಯಸೇನನು ತನ್ನ ಪತ್ರದ ನಾಲ್ಕನೆಯ ವಾಕ್ಯವನ್ನು ನೆನಪಿನಲ್ಲಿಟ್ಟುಕೊಂಡು, ಅದರಂತೆ ನಡೆಯುವುದಕ್ಕೆ ಯತ್ನಿಸುತ್ತಿರುವನಾದರೂ, ಅಪರಿಚಯಸ್ಥಳದಲ್ಲಿ ಮೊದಲೇ ಹೇಗೆ ಇತರರ ಗುಣಾವಗುಣಂಗಳನ್ನು ನಿರ್ಧರಿಸುವುದಕ್ಕಾಗುವುದು? ರಾಮಣ್ಣನಿಲ್ಲದಿರುವಾಗ ಇವನಮೇಲೆ ಭೀಮಣ್ಣನೂ, ಭೀಮಣ್ಣನಿಲ್ಲದಿರುವಾಗ ಇವನಮೇಲೆ ರಾಮಣ್ಣನೂ, ದೂರುಗಳನ್ನು ವಿಜಯಸೇನನೊಡನೆ ಹೇಳುತ್ತಿದ್ದರು. ಮನುಷ್ಯನ ಮನಸ್ಸು ದುರ್ಗುಣವನ್ನು ಹೊಂದುವಷ್ಟು ಬೇಗನೆ ಸುಗುಣ

ವನ್ನು ಹೊಂದಲಾರದೆಂಬ ಆರ್ಯರ ವಚನದಂತೆ "ಮುಖಂ ಪದ್ಮದಳಾಕಾರಂ ವಾಚಾ ಚಂದನಶೀತಲಂ । ಹೃದಯಂಕರ್ತರಿಸಂಯುಕ್ತಂ ಅತಿ ವಿನಯಂ ಧೂರ್ತಲಕ್ಷಣಂ ॥" ಎಂಬ ಸೂತ್ರಾನುಸಾರವಾಗಿ ಅತಿ ವಿನಯವಂ ತೋರ್ಪಡಿಸುತ್ತಿದ್ದ, ಭೀಮಣ್ಣನನ್ನು ಆ ಸ್ಥಳಕ್ಕೆ ಹೊಸಬನಾಗಿರುವ ವಿಜಯಸೇನನು ಹೆಚ್ಚಾಗಿ ಪ್ರೀತಿಸುತ್ತಿದ್ದನೆಂಬುದು ಆತನ ಮೇಲೆ ದೋಷಾರೋಪಣೆಯೋ? ಆದರೆ ವಿಜಯಸೇನನು ದೂರದರ್ಶಿಯಾದುದರಿಂದ ರಾಮಣ್ಣನಲ್ಲಿಯೂ, ಮತ್ತಾರಲ್ಲಿಯೂ ವೈರವನ್ನು ಕಟ್ಟಿಕೊಳ್ಳಲಿಲ್ಲವು.

ದುರ್ಮಾರ್ಗಿಗಳು ಆವಾಗಲೂ ಕಠಿಣಾತ್ಮರು! ಭೀಮಣ್ಣನು ವಿಜಯಸೇನನ ಸರ್ವಸ್ವವನ್ನೂ ಅಪಹರಿಸುವುದಕ್ಕೆ ಸಮಯವನ್ನು ನೋಡುತ್ತಿದ್ದನು. ಒಂದುದಿನ ರಾತ್ರಿ ಈತನ ಮನೆಗೇ ಕನ್ನವನ್ನು ಹಾಕಿದ್ದನು. ಅದುವರೆಗೆ ವಿಜಯಸೇನನು ಎಚ್ಚರಗೊಂಡುದುದರಿಂದ ಆಗಲಿಲ್ಲವು. ಆದರೂ ಮೇಲೆ ಮಾತ್ರ ಅತಿ ವಿನಯವಾದ ಮಾತನ್ನಾಡುತ್ತಾ ಅತಿ ಪ್ರೀತಿಯುತನಾದ ಸ್ನೇಹಿತನಂತೆ ನಟಿಸುತ್ತಿದ್ದನು. ಭೀಮಣ್ಣನು ಒಂದುದಿನ ತನ್ನ ಇತರ ಸ್ನೇಹಿತರೊಂದಿಗೆ ಆ ನಗರದಲ್ಲಿ ಪ್ರಸಿದ್ಧಳಾದ ಮಂಜುಳೆ ಎಂಬ ಗಣಿಕೆಯ ಮನೆಗೆ ಕನ್ನವನ್ನು ಹಾಕಿ, ಒಳಹೊಕ್ಕು ಅಲ್ಲಿನ ವಸ್ತುಗಳಲ್ಲಿ ಕೆಲವನ್ನು ತೆಗೆದುಕೊಳ್ಳುವ ಹೊತ್ತಿಗೆ ಆ ಮನೆಯ ಯಜಮಾನಿಗೆ ಎಚ್ಚರವಾಗಿ ಗದ್ದಲವನ್ನು ಮಾಡಲು, ಸಮೀಪದಲ್ಲಿದ್ದ ರಾಜಭಟರು ಕಂಡುಕೊಂಡರು. ಅವರು ಈ ಭೀಮಣ್ಣನ ಪೂರ್ವದ ಮಿತ್ರರಾದುದರಿಂದಲೂ, ಇವನು ನಿರ್ಧನನಾದುದರಿಂದ ಇವನಿಂದ ಆದಾಯವೇನೂ ಇಲ್ಲದುದರಿಂದಲೂ ವ್ಯರ್ಥವಾಗಿ ರಾಜದಂಡನೆಗೆ ಗುರಿಮಾಡಿದರೆ ಫಲವಿಲ್ಲವೆಂದು ಆಲೋಚಿಸಿ, ನಿನ್ನ ಬಿಡುಗಡೆಗೆ ಪ್ರತಿಫಲವೇನನ್ನು ಕೊಡುವೆ? ಎಂದು ಅವನನ್ನು ಕೇಳಲು ಆಸ್ತಿವಂತನಾಗಿ ಕಾಣುವ ವಿಜಯಸೇನನಮೇಲೆ ಈ ಸಂದೇಹವುಂಟಾಗುವಂತೆ ಮಾಡುವೆನು; ಆತನಿಂದ ನಿಮ್ಮ ಇಷ್ಟ ಬಂದಷ್ಟು ಧನವನ್ನು ಹೊಂದಬಹುದು, ಎಂದು ಹೇಳಿ, ತಾನು ಕಳವಿನಿಂದ ತಂದಿದ್ದ ಕೆಲವು ವಸ್ತುಗಳನ್ನು ವಿಜಯಸೇನನ ಮನೆಯ ಬಳಿ ಹಾಕಿದನು. ರಾಜಭಟರು ಆ ವಿಜಯಸೇನನನ್ನು ಹಿಡಿದು ಅಧಿಕವಾಗಿ ಹಿಂಸಿಸಿದರೂ ಆತನು ನಿಜ

ವಾಗಿ ನಿರಪರಾಧಿಯಾದುದರಿಂದ, ಏನನ್ನೂ ಕೊಡದಿರಲು, ಕೊನೆಗೆ ವಿಧಿಯಿಲ್ಲದೆ ಆತನನ್ನು ನ್ಯಾಯಸ್ಥಾನಕ್ಕೆ ಎಳೆದರು. ನ್ಯಾಯಸ್ಥಾನದಲ್ಲಿ ಮೊದಲು, ಆ ಕಳವಿನ ವಸ್ತುಗಳು ವಿಜಯಸೇನನ ಮನೆಯಲ್ಲಿದ್ದುದನ್ನು ನೋಡಿದುದಕ್ಕೆ ಈ ಭೀಮಣ್ಣನೇ ಮೊದಲನೇ ಸಾಕ್ಷಿಯಾದನು. ನ್ಯಾಯಾಧಿಪತಿ, ಈ ಭೀಮಣ್ಣನ ಹಿಂದಿನ ನಡತೆಗಳನ್ನು ಚೆನ್ನಾಗಿ ಬಲ್ಲವನಾದುದರಿಂದ ಇವನ ಮಾತನ್ನು ನಂಬಲಿಲ್ಲವು. ಆ ನ್ಯಾಯಸ್ಥಾನದ ಲೇಖಕರಲ್ಲಿ ಒಬ್ಬನಾಗಿದ್ದ ರಾಮಣ್ಣನು, ವಿಜಯಸೇನನ ಸದ್ಗುಣಗಳನ್ನೂ ಆತನ ಒಳ್ಳೆಯ ನಡತೆಯನ್ನೂ ಶ್ಲಾಘಿಸಿ, ಆಗ ತನ್ನೊಡನೆ ವಿಜಯಸೇನನು ಇದ್ದನಾದುದರಿಂದ ಈ ಕೃತ್ಯಕ್ಕೆ ಈತನು ಸೇರಿದ್ದನೆಂಬುವುದು ಸುಳ್ಳು ! ಎಂದು ನ್ಯಾಯಾಧಿಪತಿಯೊಡನೆ ಅರಿಕೆಮಾಡಿದನು. ನ್ಯಾಯಾಧಿಪತಿಯದನ್ನು ನಂಬಿ, ವಿಜಯಸೇನನಿಗೆ ಮನ್ನಣೆಯನ್ನು ಮಾಡಿ, ಮನೆಗೆ ಕಳುಹಿಸಿದನು. ಮರುದಿನ ಭೀಮಣ್ಣನು ಬಂದು ಅತ್ಯಂತ ವಿನಯದಿಂದ "ನೀಚರಾದ ರಾಜಭಟರಿಂದ ಬಹಳ ಹಿಂಸೆಪಟ್ಟಿರಲ್ಲವೆ ? ಆ ತುಂಟರಿಗೆ ತಕ್ಕ ಶಿಕ್ಷೆಯನ್ನು ಮಾಡಿಸುವೆನು. ತಾವು ವ್ಯಸನಪಡತಕ್ಕ ಅವಶ್ಯಕವಿಲ್ಲ." ಎಂದು ಉಪಚಾರವನ್ನು ಹೇಳಲು, ವಿಜಯಸೇನನು, "ಮಹನೀಯರೆ! ತಮ್ಮ ಮಹದುಪಕಾರವೂ ಸಾಕು ! ತಮ್ಮೊಡನಾಟವೂ ಸಾಕು ! ತಾವು ಕೋಪಿಸದೆ ಇಂದಿನಿಂದಲೂ ನನ್ನಲ್ಲಿಗೆ ಬಾರದಿದ್ದರೆ ಅದೇ ಉಪಕಾರ!" ಎಂದು ಹೇಳಿ ತನ್ನ ಓಲೆಯ ನಾಲ್ಕನೆಯ ವಾಕ್ಯದ ವಿಷಯವು ಚೆನ್ನಾಗಿ ಪರಿಶೀಲನೆಯಾಯಿತೆಂದುಕೊಂಡನು. ಅಂದಿನಿಂದ ರಾಮಣ್ಣನನ್ನು ಪ್ರಿಯಮಿತ್ರನನ್ನಾಗಿ ಮಾಡಿಕೊಂಡು ಕೆಲವು ದಿನಗಳಾನಗರದಲ್ಲಿದ್ದು ಬಳಿಕ ತನ್ನ ನಿಜನಗರಿಗೈದಿ, ಮಂತ್ರಿಗಳಿಂದಲೂ, ಪರಿವಾರದಿಂದಲೂ ಅಧಿಕವಾಗಿ ಸತ್ಕರಿಸಲ್ಪಟ್ಟವನಾಗಿ ಅತಿ ವಿಚಕ್ಷಣೆಯಿಂದ ರಾಜ್ಯಭಾರವನ್ನು ಮಾಡುತ್ತಿರಲು, ಒಂದು ದಿನ ಒಬ್ಬ ಮುದುಕನು ಒಂದು ಶಾರಿಕೆಯನ್ನು ತೆಗೆದುಕೊಂಡು, ಮಹಾರಾಜನಿಗೆ ಅರ್ಪಿಸಬೇಕೆಂದು ಬಂದು, ರಾಜನಿಗೆ ಅದನ್ನು ತೋರಿಸಿ, "ಮಹಾರಾಜನೆ! ಇದು ಬಹು ಬುದ್ಧಿಯುಳ್ಳುದು ! ಇದರ ಹೆಸರು ಚಾತುರ್ಯವತಿ ಯೆಂದು ! ರಾಜಾಸ್ಥಾನದಲ್ಲಿರತಕ್ಕುದಾದುದರಿಂದ ಕಾಣಿಕೆಯಾಗೊಪ್ಪಿಸಬೇಕೆಂದು ತಂದೆನು ! ದಯೆಯಿಟ್ಟು

ಸ್ವೀಕರಿಸಬೇಕು !" ಎಂದು ಸಾಷ್ಟಾಂಗ ದಂಡಪ್ರಣಾಮವನ್ನು ಮಾಡಿ ಅರ್ಪಿಸಿ, ರಾಜನಿಂದ ಬಹುಮತಿಯನ್ನು ಪಡೆದು ಹೊರಟುಹೋದನು.

ಆಗ ಮಹಾರಾಜನಾದ ವಿಜಯಸೇನನು. ತನ್ನಲ್ಲಿ ತಾನು ಹೀಗೆ ಆಲೋಚಿಸತೊಡಗಿದನು. ಈ ಗಿಳಿಯ ಹೆಸರೂ ಚಾತುರ್ಯವತಿ ! ನನಗೆ ಈಗ್ಗೆ ಕೆಲವು ದಿನಗಳ ಹಿಂದೆ ಸಿಕ್ಕಿದ್ದ ಸುದತಿಯ ಹೆಸರೂ ಚಾತುರ್ಯವತಿ ! ಆಕೆಯು ತನ್ನ ತಂದೆಯಿಂದ ನನಗೆ ಆಹ್ವಾನಪತ್ರಿಕೆಯನ್ನು ಕಳುಹುವೆನೆಂದು ಹೇಳಿ ಹೊರಟುಹೋದವಳು, ಇದುವರೆಗೂ ಆಕೆಯ ಸುದ್ದಿಯೇ ಇಲ್ಲವು. ಅಥವಾ ನಾನು ಇಲ್ಲಿಲ್ಲದಾಗ ಕಳುಹಿಸಿದ್ದು ನಾನಿಲ್ಲಿ ಇಲ್ಲದ ವಾರ್ತೆಯನ್ನು ಕೇಳಿ, ನಿರಾಶಳಾದಳೋ ? ಆಕೆಯು ನನಗಾಗಿ ಎಷ್ಟು ಚಿಂತಿಸುವಳೋ ? ಹಾಗೆ ಆಹ್ವಾನಪತ್ರಿಕೆಯನ್ನು ಕಳುಹಿಸಿದ್ದರೆ ಮಂತ್ರಿಗಳು ಹೇಳದಿರುವರೇ ? ಕಳುಹಲಿಲ್ಲವೆಂಬುವುದು ನಿಜವು. ಆಕೆ ನಿಜವಾಗಿ ಗಂಧರ್ವಸ್ತ್ರೀಯೋ ? ಮಾನುಷಸ್ತ್ರೀಯೋ ? ಅಥವಾ ಮಾಯಾಸ್ತ್ರೀಯೋ ? ಮೂರು ವರ್ಷಂಗಳ ಮೇಲಾದರೂ ಆಕೆಯ ಸುದ್ದಿಯೇ ಇಲ್ಲದಿರುವುದರಿಂದ, ಮೋಸಗಾತಿ ಎಂದು ಊಹಿಸಬೇಕಾಗಿದೆ. ವ್ಯರ್ಥವಾಗಿ ಚಂದ್ರಹಾಸವು ನನ್ನ ಕೈತಪ್ಪಿತಲ್ಲಾ ? ಈ ಅಂಗುಳೀಯಕವೂ ಕೈತಪ್ಪಿದ್ದುದು ನನ್ನ ಪೂರ್ವಪುಣ್ಯದಿಂದಲೇ ಮತ್ತೆ ಕೈಸೇರಿತು. ಇನ್ನಾಮಾತೇಕೆ ? ಎಂದು ಸ್ವಲ್ಪಹೊತ್ತು ಯೋಚಿಸುತ್ತಿದ್ದು ಮತ್ತೆ ಏನನ್ನೋ ಜ್ಞಾಪಿಸಿಕೊಂಡು ಚಾತುರ್ಯವತಿ ಎಂಬ ಹೆಸರನ್ನು ಕೇಳುತ್ತಲೇ ನನ್ನ ಮಡದಿಯ ನೆನಪು ಬಂದಿತು ! ಆಕೆಯನ್ನು ನಿಷ್ಕಾರಣವಾಗಿ ಸೆರೆಯಲ್ಲಿಟ್ಟಿರುವೆನಲ್ಲಾ ? ಇದುವರೆಗೂ ವಿಚಾರಿಸಿಕೊಳ್ಳದಿರುವ ನಾನು ಎಂತಹ ಕಠಿಣಾತ್ಮನು ? "ಸೆರೆಬೇಡರ್ಭಕ ಪಕ್ಷಿ ವೃದ್ಧವನಿತಾ ಗೋವಿಪ್ರದೀನರ್ಕಳಾ" ಎಂಬ ಆರ್ಯರ ವಚನವಿದ್ದೂ ಅವನ್ನು ನಿರಾಕರಿಸಿದೆನಲ್ಲಾ ? ಆದರೆ ನಾನು ವಿರೋಧಬುದ್ಧಿಯಿಂದ ಆಕೆಯನ್ನು ಸೆರೆಯಲ್ಲಿಡಲಿಲ್ಲವು, ಆಕೆಯ ಬುದ್ಧಿಯನ್ನು ಪರೀಕ್ಷಿಸಬೇಕೆಂದುತಾನೆ ಸಮುದ್ರಮಧ್ಯದಲ್ಲಿರಿಸಿರುವೆನು? ಇನ್ನು ಆಕೆಯನ್ನು ವಿಚಾರಿಸಿಕೊಳ್ಳುವುದೊಳ್ಳೆಯದು ! ಈಗಲೇ ಹೊರಡುವೆನು ! ಎಂದು ಮಂತ್ರಿಗಳನ್ನೂ, ಕೆಲವು ಜನ ಸೇವಕರನ್ನೂ ಕರೆದುಕೊಂಡು ಬಂದು,

ನಾವೆಯನ್ನೇರಿ ಸಮುದ್ರವನ್ನು ದಾಟಿ, ಸುಂದರ ದ್ವೀಪವನ್ನು ಸೇರಿ, ಮಂತ್ರಿಗಳನ್ನೂ, ಪರಿವಾರವನ್ನೂ ಒಂದೆಡೆ ನಿಲ್ಲಿಸಿ ತಾನೊಬ್ಬನೇ ಹೊರಟು, ರಾತ್ರಿಯಲ್ಲಿ ರಹಸ್ಯವಾಗಿ ರಾಣಿವಾಸವನ್ನು ಸೇರಿ, ರಾಣಿ ನಿದ್ರಿಸುತ್ತಿರುವ ಚಿಕ್ಕ ಮನೆಗೆ ಹೋಗಿ ಅಲ್ಲಿ ಸುಂದರನಾದ ನಂದನನೊಂದಿಗೆ ಆನಂದದಿಂದ ಸುಖವಾಗಿ ಪವಡಿಸಿರುವ ತನ್ನ ಸುಂದರಿಯನ್ನು ಕಂಡು, ಇಲ್ಲಿಗೆ ಇವಳನ್ನು ಕಳುಹಿಸಿ ನಾಲ್ಕು ವರುಷಂಗಳಾದವು. ಮೂರು ವರುಷದ ಬಾಲಕನಿವನಾರು? ಇನ್ನಾರನ್ನೇಕೆ ತನ್ನ ಮಗ್ಗಲಿನಲ್ಲಿರಿಸಿಕೊಳ್ಳುವಳು? ಅಂತಹ ಪ್ರಿಯರು ತಾನೆ ಇಲ್ಲಿ ಆರಿರುವರು? ಇವನು ಪರಕೀಯನಲ್ಲವು, ಇವಳ ಮಗನೇ ನಿಜವು! ಇವನು ಹೇಗೆ ಹುಟ್ಟಿದನು? ಇವಳು ದುರ್ವರ್ತನೆಯುಳ್ಳವಳು! ನನ್ನ ಮಡದಿಯೆನ್ನಿಸಿಕೊಳ್ಳುವುದಕ್ಕೆ ತಕ್ಕವಳಲ್ಲವು! ಇವಳು ತನ್ನ ನಡತೆಯಿಂದ ಕೈಹಿಡಿದವನಿಗೂ, ಹುಟ್ಟಿದ ಸೇರಿದ ವಂಶಂಗಳಿಗೂ ಅಪಕೀರ್ತಿದಾಯಕಳಾದಳು! ಇವಳನ್ನು ಈ ಕ್ಷಣವೇ ಈ ಕಠಾರಿಯಿಂದ ಇರಿದುಬಿಡುವೆನು. ಎಂದು ತನ್ನ ನಡುವಿನಲ್ಲಿರಿಕಿಕೊಂಡಿದ್ದ ಕಠಾರಿಯನ್ನು ಈಚೆಗೆ ತೆಗೆದು, ಕೈಯೆತ್ತುವ ಹೊತ್ತಿಗೆ, ತನ್ನ ತಂದೆಯು ಆಜ್ಞೆಮಾಡಿದ್ದ "ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು!" ಎಂಬ ವಾಕ್ಯವು ನೆನಪಿಗೆ ಬರಲು, ಇದರ ನೈಜವನ್ನು ವಿಚಾರಿಸಿ ಆಮೇಲೆ ತಕ್ಕ ಶಿಕ್ಷೆಯನ್ನು ಮಾಡೋಣವೆಂದು ಈಚೆಗೆ ಬಂದು, ಆ ಕಿರುಮನೆಯ ಬಾಗಿಲಿಗೆ ಬೀಗವನ್ನು ಹಾಕಿ, ಮಂತ್ರಿಗಳನ್ನೂ, ಪರಿವಾರವನ್ನೂ ಕರೆಯಿಸಿ, ಪುತ್ರಯುಕ್ತಳಾದ ಮಹಿಷಿಯನ್ನು ಕರೆಯಿಸಿ, ವಿಚಾರಿಸಲು, ಆಕೆ ಮಹಾರಾಜನೆ! "ನಿಸರ್ಗನಿಪುಣಾಸ್ತ್ರಿಯಃ" ಎಂಬ ವಾಕ್ಯವು ಅಬದ್ಧವೆಂದು ತಾವು ಅಂದು ಹೇಳಿದಿರಷ್ಟೆ? ಸ್ತ್ರೀಯರಿಗೆ ಸಹಜವಾದ ನೈಪುಣ್ಯದಿಂದ ನಿಮ್ಮನ್ನು ಮೋಹಗೊಳಿಸಿ ಈ ಪುತ್ರನನ್ನು ಪಡೆದೆನು. ಕ್ಷಮಿಸಬೇಕು! ಎಂದು ನಮಸ್ಕರಿಸಿದಳು.

ರಾಜಂ—ನಾನು ನಿನ್ನ ಮುಖವನ್ನೇ ಕಾಣೆನಲ್ಲಾ! ಅಬದ್ಧವನ್ನು ನುಡಿಯುವೆಯಾ?

ಚಾತುರ್ಯವತಿ—ಆರ್ಯಪುತ್ರನೆ! ದಂಡಕಾರಣ್ಯದ ವಿಷಯವನ್ನು

ಜ್ಞಾಪಿಸಿಕೊಳ್ಳುವನಾಗು ! ಅಂದು ನನಗೆ ದಯೆಯಿಟ್ಟು ಕೊಟ್ಟ ಅಂಗುಲೀಯಕ ಚಂದ್ರಹಾಸಂಗಳಲ್ಲಿ, ಅಂಗುಲೀಯಕವೆಲ್ಲಿಯೋ ಹೋಯಿತು. ಈ ಚಂದ್ರಹಾಸವು ಸರ್ವಜನರ ಮನಸ್ಸಂದೇಹಂಗಳನ್ನೂ ನಿವಾರಿಸುವುದು ! ಎಂದು ತನ್ನ ಕಿರುಮನೆಯಲ್ಲಿದ್ದ ಚಂದ್ರಹಾಸವನ್ನು ತಂದು ರಾಜನಿಗೆ ಒಪ್ಪಿಸಿದಳು.

ಮಂತ್ರಿಗಳೂ ಪರಿವಾರವೂ—(ಅತಿ ಸಂತೋಷದಿಂದ) ಭಳಿರೆ ! ಮಹಿಷಿ! ನೀನೀಗ ಪತಿವ್ರತೆ ! ಪೂತೆ ! ಚಾತುರ್ಯವತಿ ! ಎಂದು ಹೊಗಳುತ್ತಿದ್ದರು.

ರಾಜಂ—(ಸಂತೋಷದಿಂದ) ಖಡ್ಗವನ್ನು ಕೈಕೊಂಡು,ಚಂದ್ರಹಾಸವೇ! ಎಷ್ಟು ದಿನಂಗಳಿಗೆ ನನ್ನ ಕೈಸೇರಿ ನನ್ನ ಮನಃಕುಮುದಕ್ಕೆ ಚಂದ್ರಹಾಸವಾದೆ ? ಭಳಿರೆ ! ಚಾತುರ್ಯವತಿ ! ನೀನೀಗ ಚಾತುರ್ಯವತಿ ! ನಾನಿನ್ನು ಸಂತೋಷಿತನು ! ಧನ್ಯನು ! ಮಾನ್ಯನು ! ಆದರೆ ಪ್ರೇಯಸೀ ! ನೀನು ಹೇಗೆ ಅಗಾಧವಾದ ಸಮುದ್ರವನ್ನು ದಾಟಿ ದಂಡಕಾರಣ್ಯಕ್ಕೆ ಬಂದಿದ್ದು ಮತ್ತೆ ಹೇಗೆ ಈ ಸ್ಥಳವನ್ನು ಸೇರಿದೆ ?

ಚಾತುರ್ಯವತಿ—ಆರ್ಯಪುತ್ರನೆ ! ನಮ್ಮ ಮನೆಯಲ್ಲಿರುವ ಪಾತ್ರೆಗಳಿಂದಲೂ, ವನದಲ್ಲಿರುವ ಬಾಳೆಯ ಮರಂಗಳ ತುಂಡುಗಳಿಂದಲೂ, ಸಣ್ಣದೊಂದು ತೆಪ್ಪವನ್ನು ಕಟ್ಟಿ, ಅದರ ಸಹಾಯದಿಂದಲೂ. ನಿಮ್ಮ ಆಶೀರ್ವಾದ ಬಲದಿಂದಲೂ, ಸಮುದ್ರವನ್ನು ದಾಟಿದೆನು. ಯುಕ್ತಿಗಿಂತಲೂ ದೊಡ್ಡದೆನಿಸಿರುವುದಾವುದು ?

ರಾಜಂ—ಪ್ರಿಯೆ ! ನಿನ್ನ ಚಾತುರ್ಯದ ರೀತಿಯನ್ನು ಕೊಂಡಾಡುವುದಕ್ಕೆ ನನಗೆ ಶಕ್ತಿ ಸಾಲದು. ಪುರುಷರಿಗೆ ಸ್ತ್ರೀಯರೇ ಸುಕೃತ ದುಷ್ಕೃತಂಗಳನ್ನೂ, ಸತ್ಕೀರ್ತಿ ದುಷ್ಕೀರ್ತಿಗಳನ್ನೂ, ಕರುಣೆ ಕಠಿಣತೆಗಳನ್ನೂ, ನ್ಯಾಯಾನ್ಯಾಯಂಗಳನ್ನೂ, ವೈರಿಮಿತ್ರರುಗಳನ್ನೂ ಪಡೆಯುವಂತೆ ಮಾಡುವರು. ಸ್ತ್ರೀಯರನ್ನು ಅಬಲೆಯರೆನ್ನುವುದು ತಪ್ಪು ! ಆದರೆ ದೇಹದಾರ್ಢ್ಯತೆಯು ಪುರುಷರಿಗಿಂತಲೂ ಕಡಮೆಯಾಗಿರುವುದರಿಂದ ಅವರು ಪುರುಷರಿಗೆ ಪಾಲನೀಯರೆನಿಸುವರು ! ಆದರೆ, ಅಬಲೆಯರು, ಮನಸ್ಸಿಗೆ

ವಿರೋಧವಾದ ಕಾರ್ಯಗಳನ್ನಾಗಲೀ, ಹಿಡಿದ ಕಾರ್ಯಗಳನ್ನಾಗಲೀ ಎಷ್ಟು ಸಾಹಸ, ಕಷ್ಟಕ್ಲೇಶಗಳನ್ನೂ ಸಹಿಸಿಯಾದರೂ ನಿರ್ವಹಿಸುವರು. ಅದರಿಂದಲೇ ಅಬಲೆಯರು ಒಂದೊಂದು ವೇಳೆ ಪ್ರಬಲೆಯರೂ ಆಗುವರು. ಮುಖ್ಯವಾಗಿ, ಸತೀತ್ವರಕ್ಷಣಾಸಕ್ತಿಯುಳ್ಳ ಸಾಧ್ವಿಯರು ಸತ್ಪುರುಷಸಮಾಜದಲ್ಲಿ ಅಬಲೆಯರಾಗಿಯೂ, ದುರ್ಜನರಲ್ಲಿ ಪ್ರಬಲೆ–ಅತಿ ಬಾಲೆಯರಾಗಿಯೂ ಪರಿಣಮಿಸುವರು. ಅವರ ಮನೋಧರ್ಮವನ್ನು ಅನುಸರಿಸಿ ಸಮಯೋಚಿತವಾದ ಉಪಾಯಕೌಶಲ್ಯವೂ ಅವರಲ್ಲಿ ಸೇರುವುವು. ಆದುದರಿಂದ ನೀನು ಹೇಳಿದಂತೆ "**ಸ್ತ್ರೀಯರು ನಿಸರ್ಗ ನಿಪುಣೆಯರು**" ಎಂಬುದು ನಿಜವಾದುದು. ಆದರೆ ಭಗವಂತನು ಅವರ ನೈಪುಣ್ಯವನ್ನು ಲೋಕಕ್ಕೆ ಹಿತವಾಗುವಂತೆ ಮಾಡುತ್ತಿರಬೇಕೆಂಬುದು ನನ್ನ ಅಭೀಷ್ಟವು.

ಹೀಗೆ ಹೇಳಿ, ಸಕಲರಿಂದಲೂ ಸನ್ಮಾನಿತೆಯಾದ ಚಾತುರ್ಯವತಿಯನ್ನು ಮನ್ನಿಸಿ, ಸಕಲ ಪರಿವಾರದೊಡನೆ ಸಂಭ್ರಮದಿಂದ ತನ್ನ ಪಟ್ಟಣಕ್ಕೆ ಬಂದು, ತನಗೆ ಅಷ್ಟುಮಟ್ಟಿನ ಲೋಕಾನುಭವವುಂಟಾಗಲು ದಾರಿ ತೋರಿಸಿದ ಬ್ರಾಹ್ಮಣ ಕುಮಾರನನ್ನು ಕರತರಿಸಿ, ಆತನಿಗೆ ಯಥೇಷ್ಟವಾಗಿ ಬಹುಮಾನಮಾಡಿ ಕಳುಹಿಸಿ, ಪತ್ನೀಪುತ್ರ, ಪರಿವಾರದೊಡನೆ ಸುಖವಾಗಿ ರಾಜ್ಯಭಾರ ಮಾಡುತ್ತಿದ್ದನು.

ಭದ್ರಂ! ಶುಭಂ!! ಮಂಗಳಂ!!!